ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

# ಸಹಕಾರ ವಾರ್ತಾಪತ್ರಿಕೆ

ಸಂಪುಟ : 3 । ಸಂಚಿಕೆ : 4 | ಮೇ : 2021 | ಪುಟಗಳು : 20 । ಬೆಲೆ : 25/–




ಜಿ.ಟಿ. ದೇವೇಗೌಡ
ಅಧ್ಯಕ್ಷರು



ಬಿ.ವಿ. ಜಗದೀಶ್
ಉಪಾಧ್ಯಕ್ಷರು




ಡಾ. ಬಿ.ಡಿ. ಭೂಕಾಂತ
ನಿರ್ದೇಶಕರು



ಡಾ. ಶೇಖರಗೌಡ ಮಾಲಿಪಾಟೀಲ
ನಿರ್ದೇಶಕರು

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನೂತನ ಅಧ್ಯಕ್ಷರಾಗಿ ಶಾಸಕ ಜಿ.ಟಿ. ದೇವೇಗೌಡರು, ಉಪಾಧ್ಯಕ್ಷರಾಗಿ ಜಗದೀಶ ಎಂ. ಕವಟಗಿ ಮಠ ಹಾಗೂ ಪತ್ತಿನ ಮಹಾಮಂಡಳದ ನಿರ್ದೇಶಕರುಗಳಾದ ಡಾ. ಬಿ.ಡಿ. ಭೂಕಾಂತ, ಡಾ. ಶೇಖರಗೌಡ ಮಾಲಿ ಪಾಟೀಲ ಅವರುಗಳು ಆಯ್ಕೆಯಾಗಿದ್ದಾರೆ.




ಸಮಸ್ತ ಜನತೆಗೆ - ಸಹಕಾರಿ ಬಂಧುಗಳಿಗೆ
ವಿಶ್ವ ಕಾರ್ಮಿಕರ ದಿನಾಚರಣೆ ಹಾಗೂ ಜಗಜ್ಯೋತಿ ಶ್ರೀ ಬಸವೇಶ್ವರ ಜಯಂತಿ
ಹಾರ್ದಿಕ ಶುಭಾಷಯಗಳು



ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಸಹೋದರ ಸಂಸ್ಥೆಯಾಗಿರುವ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಆಡಳಿತಮಂಡಳಿ ಚುನಾವಣೆ ನಡೆದು ನೂತನ ಅಧ್ಯಕ್ಷರಾಗಿ ಜಿ.ಟಿ.ದೇವೇಗೌಡ ಅವರು, ಉಪಾಧ್ಯಕ್ಷರಾಗಿ ಜಗದೀಶ ಎಂ. ಕವಟಗಿ ಮಠ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪತ್ತಿನ ಮಹಾಮಂಡಳದ ನಿರ್ದೇಶಕರುಗಳಾದ ಡಾ. ಬಿ.ಡಿ.ಭೂಕಾಂತ, ಶ್ರೀ ಶೇಖರಗೌಡ ಮಾಲಿಪಾಟೀಲ ಅವರು ಸಹ ಸಹಕಾರ ಮಹಾಮಂಡಳದ ಆಡಳಿತಮಂಡಳಿಗೆ ಆಯ್ಕೆಯಾಗಿದ್ದಾರೆ.

ಪತ್ತಿನ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಕೆ. ಲಲಿತ ಜಿ.ಟಿ.ದೇವೇಗೌಡ ಅವರು ಸಹಕಾರ ಮಹಾಮಂಡಳದ ಆಡಳಿತಮಂಡಳಿ ನಿರ್ದೇಶಕರುಗಳನ್ನು ಅಭಿನಂದಿಸಿ ಶುಭ ಕೋರಿದ್ದಾರೆ.



# ಶೇ.5.52ರ ಮಟ್ಟದಲ್ಲಿ ಚಿಲ್ಲರೆ ಹಣದುಬ್ಬರ



**ನವದೆಹಲಿ :** ಚಿಲ್ಲರೆ ಹಣ ದುಬ್ಬರದರವು ಮಾರ್ಚ್ ತಿಂಗಳಲ್ಲಿ ಶೇಕಡ 5.52ಕ್ಕೆ ಏರಿಕೆ ಕಂಡಿದೆ. ಇದಕ್ಕೆ ಮುಖ್ಯ ಕಾರಣ ಆಹಾರ ವಸ್ತುಗಳ ಬೆಲೆಯಲ್ಲಿ ಆಗಿರುವ ಹೆಚ್ಚಳ. ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ಪ್ರಮಾಣವು ಫೆಬ್ರವರಿಯಲ್ಲಿ ಶೇ.5.03 ಆಗಿತ್ತು. ಮಾರ್ಚ್ ತಿಂಗಳಲ್ಲಿ ಆಹಾರ ವಸ್ತುಗಳ ಹಣದುಬ್ಬರ ಪ್ರಮಾಣವು ಶೇ.4.94ಕ್ಕೆ ತಲುಪಿದೆ. ಇದು ಫೆಬ್ರವರಿಯಲ್ಲಿ ಶೇ.3.87ರಷ್ಟು ಇತ್ತು ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳುತ್ತಿವೆ. 2020–21ರ ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿ ಹಣದುಬ್ಬರ ಪ್ರಮಾಣವು ಶೇ.5ರಷ್ಟು ಇರಲಿದೆ ಎಂದು ಭಾರತೀಯ ರಿಜರ್ವ್ ಬ್ಯಾಂಕ್ (ಆರ್‌ಬಿಐ) ಅಂದಾಜಿಸಿತ್ತು. ಹೊಸ ಆರ್ಥಿಕ ವರ್ಷದ ಮೊದಲ ಆರು ತಿಂಗಳಲ್ಲಿ ಹಣದುಬ್ಬರ ಶೇ.5.2ರಷ್ಟು ಇರಲಿದೆ ಎಂದೂ ಅದು ಅಂದಾಜು ಮಾಡಿದೆ. 2020ರ ಜೂನ್‌ನಿಂದ ನವೆಂಬರ್‌ವರೆಗಿನ ಅವಧಿಯಲ್ಲಿ ಹಣದುಬ್ಬರ ಪ್ರಮಾಣವು ಶೇ.6ಕ್ಕಿಂತ ಜಾಸ್ತಿ ಆಗಿತ್ತು. ಡಿಸೆಂಬರ್‌ನಲ್ಲಿ ತುಸು ಕಡಿಮೆ ಆಯಿತು. ಜನವರಿಯಲ್ಲಿ ಶೇ.4.1ಕ್ಕೆ ಇಳಿಕೆ ಆಯಿತು. ಆದರೆ ಫೆಬ್ರವರಿಯಲ್ಲಿ ಮತ್ತೆ ಶೇ.5ರ ಮಟ್ಟಕ್ಕಿಂತ ಹೆಚ್ಚಾಯಿತು.

**ಕೈಗಾರಿಕಾ ಉತ್ಪಾದನೆ ಇಳಿಕೆ :** ದೇಶದ ಕೈಗಾರಿಕಾ ಉತ್ಪಾದನೆಯು ಸತತ ಎರಡನೇ ತಿಂಗಳಿನಲ್ಲಿಯೂ ಇಳಿಕೆ ಕಂಡಿದೆ. ತಯಾರಿಕೆ ಮತ್ತುಗಣಿ ವಲಯಗಳು ಕಂಡ ಇಳಿಕೆಯಿಂದಾಗಿ ಕೈಗಾರಿಕಾ ಉತ್ಪಾದನೆಯು ಫೆಬ್ರುವರಿಯಲ್ಲಿ ಶೇಕಡ 3.6ರಷ್ಟು ಇಳಿಕೆ ಆಗಿದೆ ಎಂದ ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ (ಎನ್‌ಎಸ್‌ಒ) ಮಾಹಿತಿ ಬಿಡುಗಡೆ ಮಾಡಿದೆ. 2020ರ ಫೆಬ್ರುವರಿಯಲ್ಲಿ ಕೈಗಾರಿಕಾ ಉತ್ಪಾದನೆಯು ಶೇ.5.2ರಷ್ಟು ಬೆಳವಣಿಗೆ ಕಂಡಿತ್ತು. ಕೈಗಾರಿಕಾ ಉತ್ಪಾದನಾ ಸೂಚ್ಯಂಕಕ್ಕೆ (ಐಐಪಿ) ಶೇ.77.63ರಷ್ಟು ಕೊಡುಗೆ ನೀಡುವ ತಯಾರಿಕಾ ವಲಯದ ಬೆಳವಣಿಗೆಯು ಫೆಬ್ರವರಿಯಲ್ಲಿ ಶೇ.3.7ರಷ್ಟು ಇಳಿಕೆ ಆಗಿದೆ. ಗಣಿ ವಲಯದ ಚಟುವಟಿಕೆಯು ಶೇ.5.5ರಷ್ಟು ಇಳಿಕೆ ಕಂಡಿದೆ.

ಕೈಗಾರಿಕಾ ಉತ್ಪಾದನೆಯು ಕೋವಿಡ್ ಕಾರಣದಿಂದಾಗಿ 2020ರ ಮಾರ್ಚ್‌ನಲ್ಲಿ ಶೇ.18.7ರಷ್ಟು ಕುಸಿತ ಕಂಡಿತ್ತು. 2020ರ ಆಗಸ್ಟ್‌ವರೆಗೂ ನಕಾರಾತ್ಮಕ ಮಟ್ಟದಲ್ಲಿಯೇ ಇತ್ತು. 2019–20ರ ಏಪ್ರಿಲ್–ಫೆಬ್ರವರಿ ಅವಧಿಗೆ ಹೋಲಿಸಿದರೆ 2020–21ರ ಏಪ್ರಿಲ್–ಫೆಬ್ರವರಿಯ ಅವಧಿಯಲ್ಲಿ ಐಐಪಿ ಶೇ.11.3ರಷ್ಟು ಇಳಿಕೆ ಕಂಡಿದೆ.

## ಜಾಹಿರಾತು ಮನವಿ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

ಮೊಬೈಲ್ ನಂ. 9008407988, ದೂರವಾಣಿ : 080 23564444, 23464033, 23464034

ಇ–ಮೇಲ್ : ksccsfltd@gmail.com, info@ksccsf.org, ವೆಬ್‌ಸೈಟ್ : www.ksccsf.org

## ಸಹಕಾರ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಮಾಸಿಕ ಸಹಕಾರ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು "ಸಹಕಾರ ಮಾಸಿಕ ವಾರ್ತಾ ಪತ್ರಿಕೆ"ಗೆ ಚಂದಾದಾರರಾಗಲು ಈ ಮೂಲಕ ಮನವಿ ಮಾಡಲಾಗಿದೆ.

– **ಸಂಪಾದಕರು**

SAHAKARA VARTHA PATHRIKE KANNADA MONTHLY
RNI-REG NO : KARKAN/2018/75796
POST REG NO : KNBGW-1816/2019-2021
POSTING DATE : 1 & 5. EVERY MONTH
POSTED AT : P/C RMS BHAVAN, BANGALORE PSO,
Blore-26 PUBLISHED ON : 30th of Previous Month

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಆಡಳಿತಮಂಡಳಿ


ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು


ಡಾ. ಬಿ.ಡಿ. ಭೂಕಾಂತ
ಉಪಾಧ್ಯಕ್ಷರು


ಶ್ರೀ ಸಿ.ಎಂ. ಮಾರೇಗೌಡ
ನಿರ್ದೇಶಕರು


ಶ್ರೀ ವಿ. ರಾಜು
ನಿರ್ದೇಶಕರು


ಡಾ. ಸಂಜಯ ಸಂ. ಹೊಸಮಠ
ನಿರ್ದೇಶಕರು


ಶ್ರೀ ಎಂ.ಜೆ. ನರೇಂದ್ರ ಕುಮಾರ
ನಿರ್ದೇಶಕರು


ಶ್ರೀ ಡಿ. ಚನ್ನಯ್ಯ
ನಿರ್ದೇಶಕರು


ಶ್ರೀ ಕೆ. ಕೃಷ್ಣಮೂರ್ತಿ
ನಿರ್ದೇಶಕರು


ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ನಿರ್ದೇಶಕರು


ಶ್ರೀ ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು


ಶ್ರೀ ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು


ಶ್ರೀ ಧರೆಪ್ಪ ಎಂ. ಅಲಗೂರ
ನಿರ್ದೇಶಕರು


ಶ್ರೀ ಗುರುಪಾದಪ್ಪಗೌಡ ಬಿ. ಪಾಟೀಲ
ನಿರ್ದೇಶಕರು


ಶ್ರೀ ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು


ಶ್ರೀ ಪಿ.ಕೆ. ಜಯಕೃಷ್ಣೇಗೌಡ
ನಿರ್ದೇಶಕರು


ಶ್ರೀ ಶೇಖರಗೌಡ ಮಾಲಿ ಪಾಟೀಲ
ನಿರ್ದೇಶಕರು


ಶ್ರೀ ಹೆಚ್.ಟಿ. ನಾಗೇಶ್
ನಿರ್ದೇಶಕರು


ಶ್ರೀ ಡಿ.ಆರ್. ನಾಗೇಶಪ್ಪ
ನಿರ್ದೇಶಕರು


ಶ್ರೀ ಉಮೇಶ ಪಿ ಬಾಳಿ
ನಿರ್ದೇಶಕರು


ಶ್ರೀ ರವೀಂದ್ರ ಪ್ರಹ್ಲಾದ ಕಲಬುರ್ಗಿ
ನಿರ್ದೇಶಕರು


ಶ್ರೀ ಚಿತ್ತರಂಜನ್ ಬೋಳಾರ್
ನಿರ್ದೇಶಕರು


ಶ್ರೀ ಕೆ.ಎಸ್.ಗುರುಪ್ರಸಾದ್
ಸಲಹೆಗಾರರು


ಶ್ರೀಮತಿ ಪಿ.ಆಶಾಲತಾ
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ)

ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು
ನಂ.16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003

Printed at : Biligiri Printers
Chamrajpet, Bengaluru - 18.

# ಸಂಪಾದಕರ ನುಡಿ



ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡ
ಅಧ್ಯಕ್ಷರು

> "ವೈದ್ಯರು, ವೈದ್ಯಕೀಯ ಸಿಬ್ಬಂದಿ, ಪೋಲೀಸ್, ಪೌರಸಂಸ್ಥೆಗಳು, ಕಂದಾಯ ಇಲಾಖೆ ಸೇರಿದಂತೆ ಪ್ರಮುಖ ಇಲಾಖೆಗಳ ಅಧಿಕಾರಿ / ನೌಕರರು / ಸ್ವಯಂ ಸೇವಕರು/ ಹಗಲಿರುಳು ಶ್ರಮಿಸುತ್ತಿದ್ದಾರೆ. ಇವರೆಲ್ಲರಿಗೂ ನಾವು ಅಭಿನಂದನೆಗಳನ್ನು ಸಲ್ಲಿಸುವ ಮೂಲಕ ಪ್ರೋತ್ಸಾಹವನ್ನು ನೀಡಿ ಅವರಲ್ಲಿ ಆತ್ಮಸ್ಥೈರ್ಯ ತುಂಬಬೇಕಾಗಿದೆ. ಕಾರಣ ಸೋಂಕಿನ ಅಲೆಯಲ್ಲಿ ಭಾರತದೇಶ ಹೆಚ್ಚು ಸೋಂಕಿತರನ್ನು ಒಳಗೊಂಡಿರುವುದು ವಿಷಾದಕರ ವಿಷಯ. ಕೋವಿಡ್ ಮಹಾಮಾರಿ ನಿಯಂತ್ರಣಕ್ಕೆ ವಿಶ್ವವೇ ಪರಿತಪಿಸುತ್ತಿದೆ."

## ಕೊರೋನಾ ಮಹಾಮಾರಿ ಎರಡನೇ ಅಲೆ ಕೋವಿಡ್ ಮುಕ್ತ ನಾಡು ಕಟ್ಟೋಣ



ದೇಶದಲ್ಲಿ 2021ರ ಏಪ್ರಿಲ್ ಮಾಹೆಯಲ್ಲಿ ಕೊರೊನಾ ಮಹಾಮಾರಿಯ ಎರಡನೇ ಅಲೆ ಎದ್ದಿದೆ. ಇದರ ಪರಿಣಾಮ ಎಲ್ಲಾ ಆಸ್ಪತ್ರೆಗಳಲ್ಲಿ ಕೊರೋನಾ ವೈರಸ್ ಸೋಂಕಿತರಿಗೆ ಚಿಕಿತ್ಸೆ ನೀಡಲು ಸುಸಜ್ಜಿತ ಸೌಲಭ್ಯಗಳ ಸಮಸ್ಯೆಗಳು ಎದುರಾಗಿವೆ. ಈ ನಡುವೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಲೇ ಇವೆ. ನೈಟ್ ಕರ್ಫ್ಯೂ, ಶಾಲಾ ಕಾಲೇಜುಗಳಿಗೆ ರಜೆ, ಪರೀಕ್ಷೆಗಳ ಮುಂದೂಡಿಕೆ ಸೇರಿದಂತೆ ಜನಸಾಮಾನ್ಯರನ್ನೂ ಸೋಂಕಿನಿಂದ ದೂರವಿಡಲು ಹಲವಾರು ಮಾರ್ಗಪಾಯಗಳನ್ನು ಅನುಸರಿಸುತ್ತಲೇ ಬಂದಿವೆ. ಈಗಾಗಲೇ ರಾಜ್ಯ ಸರ್ಕಾರ 14 ದಿನಗಳ ಅವಧಿಯ ಲಾಕ್ ಡೌನ್ ಕರ್ಫ್ಯೂ ವಿಧಿಸಿದೆ.

ವೈದ್ಯರು, ವೈದ್ಯಕೀಯ ಸಿಬ್ಬಂದಿ, ಪೋಲೀಸ್, ಪೌರಸಂಸ್ಥೆಗಳು, ಕಂದಾಯ ಇಲಾಖೆ ಸೇರಿದಂತೆ ಪ್ರಮುಖ ಇಲಾಖೆಗಳ ಅಧಿಕಾರಿ / ನೌಕರರು / ಸ್ವಯಂ ಸೇವಕರು/ ಹಗಲಿರುಳು ಶ್ರಮಿಸುತ್ತಿದ್ದಾರೆ. ಇವರೆಲ್ಲರಿಗೂ ನಾವು ಅಭಿನಂದನೆಗಳನ್ನು ಸಲ್ಲಿಸುವ ಮೂಲಕ ಪ್ರೋತ್ಸಾಹವನ್ನು ನೀಡಿ ಅವರಲ್ಲಿ ಆತ್ಮಸ್ಥೈರ್ಯ ತುಂಬಬೇಕಾಗಿದೆ. ಕಾರಣ ಸೋಂಕಿನ ಅಲೆಯಲ್ಲಿ ಭಾರತ ದೇಶದಲ್ಲಿ ಹೆಚ್ಚು ಸೋಂಕಿತರನ್ನು ಒಳಗೊಂಡಿರುವುದು ವಿಷಾದಕರ ವಿಷಯ.

ಕೋವಿಡ್ ಮಹಾಮಾರಿ ನಿಯಂತ್ರಣಕ್ಕೆ ವಿಶ್ವವೇ ಪರಿತಪಿಸುತ್ತಿದೆ. ಸಂದರ್ಭ ಹೀಗೆ ಇರುವಾಗ ಜನಸಾಮಾನ್ಯರೂ ಕೂಡ ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಸರ್ಕಾರಗಳು ಹೊರಡಿಸುವ ಮಾರ್ಗಸೂಚಿಗಳಿಗೆ ಬೆಲೆಕೊಟ್ಟು ಸ್ವಯಂ ನಿರ್ಬಂಧಗಳನ್ನು ಹೇರಿಕೊಂಡು ಕುಟುಂಬದ ಎಲ್ಲಾ ಸದಸ್ಯರುಗಳ ಆರೋಗ್ಯ ರಕ್ಷಣೆಗೆ ಒತ್ತು ನೀಡಬೇಕು ಹಾಗೂ ಗುಣಮಟ್ಟದ ಬಿಸಿ ಆಹಾರವನ್ನು ಸೇವಿಸುವುದು ಉಪಯುಕ್ತ. ಹಣ್ಣುಗಳನ್ನು ತಿನ್ನುವ ಮೂಲಕ ರೋಗ ನಿರೋಧಕ ಶಕ್ತಿಯನ್ನು  ಹೆಚ್ಚಿಸಿಕೊಳ್ಳುವುದು ಅನಿವಾರ್ಯವಾಗಿದೆ. ಸೋಂಕಿತ ವ್ಯಕ್ತಿಗಳು ಅಗತ್ಯ ಮನೆಯಲ್ಲಿಯೇ ಪ್ರತ್ಯೇಕವಾಗಿ ವಾಸ ಮಾಡುವುದರ ಮೂಲಕ ಆರೋಗ್ಯ ರಕ್ಷಣೆಗೆ ಒತ್ತು ನೀಡಿ ಕೊರೋನಾ ಸೋಂಕನ್ನು ಜಯಿಸಿ ಹೊರಬರಬೇಕಿದೆ. ಜನಸಾಮಾನ್ಯರು ಕೆಲಸವಿದ್ದರಷ್ಟೆ ಹೊರಬರುವುದು. ಕಡ್ಡಾಯವಾಗಿ ಮಾಸ್ಕ್ ಧರಿಸುವುದು. ಸ್ಯಾನಿಟೈಸರ್ ಬಳಕೆಯ ಜೊತೆಗೆ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕಾಗಿದೆ. ಇದರಲ್ಲಿ ನಾಗರೀಕರ ಸಹಭಾಗಿತ್ವವೂ ಇದ್ದು ಜವಾಬ್ದಾರಿಯನ್ನು ಅರಿತು ಸ್ವಯಂ ಕೋವಿಡ್ ಮುಕ್ತಗೊಳಿಸಲು ಸ್ವಯಂ ಕೊರೋನಾ ಯೋಧರಾಗಿ ಕಾರ್ಯನಿರ್ವಹಿಸಬೇಕಾದ ಅನಿವಾರ್ಯತೆ ಇದೆ. ಸಹಕಾರಿ ಸಂಸ್ಥೆಗಳು ಕೂಡ ಅಗತ್ಯ ಉಪಯುಕ್ತ ನೆರವು ನೀಡಬಲ್ಲವು ಎಂದು ಭಾವಿಸಿದ್ದೇನೆ. ಈ ನಿಟ್ಟಿನಲ್ಲಿ ನಾವೆಲ್ಲರೂ ನಮ್ಮ ಕುಟುಂಬಗಳ ರಕ್ಷಣೆ ಜೊತೆಗೆ ಇತರರನ್ನು ಬದುಕುಳಿಸೋಣ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :

**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಉಪಾಧ್ಯಕ್ಷರು / ಕಾರ್ಯನಿರ್ವಾಹಕ ಸಂಪಾದಕರು :

**ಡಾ. ಬಿ.ಡಿ. ಭೂಕಾಂತ**

ಉಪಸಂಪಾದಕರು :

**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :

**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**


ಸಲಹೆಗಾರರು : **ಶ್ರೀ ಕೆ.ಎಸ್. ಗುರುಪ್ರಸಾದ್**

**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

## ಆರ್ಥಿಕ ಪುನಶ್ಚೇತನಕ್ಕೆ ಕೊರೋನಾ ಎರಡನೇ ಅಲೆ ಬಹು ದೊಡ್ಡ ಹೊಡೆತ : ಶಕ್ತಿಕಾಂತ್ ದಾಸ್



**ನವದೆಹಲಿ :** ಕೋವಿಡ್–19 ಎರಡನೇ ಅಲೆ ಭುಗಿಲೆದ್ದಿರುವುದು ಭಾರತದ ಆರ್ಥಿಕ ಪುನಶ್ಚೇತನಕ್ಕೆ ಬಹುದೊಡ್ಡ ಅಪಾಯಕಾರಿ ಎಂದು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಆರು ಸದಸ್ಯರನ್ನೊಳಗೊಂಡ ವಿತ್ತೀಯ ನೀತಿ ಸಮಿತಿ ಇತ್ತೀಚಿನ ವಿತ್ತೀಯ ಸಭೆಯಲ್ಲಿ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಿದೆ. ದೇಶದಲ್ಲಿ ಪ್ರತಿದಿನ ಹೊಸ ಕೊರೋನಾ ಸೋಂಕಿನ ಸಂಖ್ಯೆ ಹೆಚ್ಚಾಗುತ್ತಲೇ ಇದೆ, ಸ್ಥಳೀಯ ಮಟ್ಟದಲ್ಲಿ ಮಿನಿ ಲಾಕ್‌ಡೌನ್ ಹೇರಲಾಗುತ್ತಿದೆ, ಇದರಿಂದ ವ್ಯಾಪಾರ–ವಹಿವಾಟು ಸಂಪರ್ಕ – ತೀವ್ರ ವಲಯಗಳ ಬೇಡಿಕೆಯನ್ನು ಕುಂಠಿತಗೊಳಿಸುತ್ತದೆ, ನಿಧಾನ ಬಳಕೆ ಬೇಡಿಕೆ ಮತ್ತು ದೊಡ್ಡ ಹೂಡಿಕೆಗಳು, ಬೆಳವಣಿಗೆಯನ್ನು ತಡೆಯುತ್ತದೆ ಎಂದು ವಿತ್ತೀಯ ಸಮಿತಿ ಸದಸ್ಯರು ಅಭಿಪ್ರಾಯಪಟ್ಟಿದ್ದಾರೆ.

ಬೇಡಿಕೆಗಳ ಪರಿಸ್ಥಿತಿಯನ್ನು ಸುಧಾರಿಸುವುದು, ಸರ್ಕಾರದಿಂದ ಹೂಡಿಕೆಯ ವರ್ಧನೆಯ ಕ್ರಮಗಳು ಬೆಳವಣಿಗೆಯ ನಿರೀಕ್ಷೆಗಳನ್ನು ಹುಸಿಮಾಡಿವೆ. ದೇಶಲ್ಲಿ ಕೋವಿಡ್–19 ಸೋಂಕಿನ ಸಂಖ್ಯೆ ವೇಗವಾಗಿ ವೃದ್ಧಿಸುತ್ತಿದೆ, ಇಂತಹ ಸಂದರ್ಭದಲ್ಲಿ ಕಳೆದ ವರ್ಷ ಲಾಕ್‌ಡೌನ್ ನಂತರ ತೀವ್ರ ಕುಸಿತ ಕಂಡ ಆರ್ಥಿಕತೆಯನ್ನು ಪುನಶ್ಚೇತನಗೊಳಿಸುವುದು ಬಹುದೊಡ್ಡ ಸವಾಲಾಗಿದೆ. ಆರ್ಥಿಕ ಚೇತರಿಕೆಯನ್ನು ಪರಿಣಾಮಕಾರಿಯಾಗಿ ಭದ್ರಪಡಿಸುವುದು ಈ ಹೊತ್ತಿನ ಅಗತ್ಯವಾಗಿದ್ದು, ಈ ಮೂಲಕ ದೀರ್ಘ ಕಾಲಕ್ಕೆ ವಿಸ್ತಾರವಾಗಿ ಆರ್ಥಿಕ ಬೆಳವಣಿಗೆಯನ್ನು ಕಾಣಬಹುದಾಗಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ್ ದಾಸ್ ಹೇಳಿದ್ದಾರೆ.

ಪ್ರಸಕ್ತ ಆರ್ಥಿಕ ಸಾಲಿನ ತ್ರೈಮಾಸಿಕ ವಿತ್ತೀಯ ಸಭೆಯಲ್ಲಿ ರೆಪೊ ದರ ಮತ್ತು ರಿವರ್ಸ್ ರೆಪೊ ದರವನ್ನು ಬದಲಾಯಿಸದೆ ಕಳೆದ ಆರ್ಥಿಕ ಸಾಲಿನ ಕೊನೆಯ ತ್ರೈಮಾಸಿಕದಷ್ಟೇ ಇರಿಸಿದೆ. ಚಿಲ್ಲರೆ ಹಣದುಬ್ಬರ ಮತ್ತು ಕೊರೋನಾ ಎರಡನೇ ಅಲೆ ಎದ್ದ ನಂತರ ಉಂಟಾಗಿರುವ ಆರ್ಥಿಕ ಅನಿಶ್ಚಿತತೆ ಹಿನ್ನೆಲೆಯಲ್ಲಿ ಆರ್‌ಬಿಐ ಈ ನಿರ್ಧಾರಕ್ಕೆ ಬಂದಿದೆ. 2021–22ನೇ ಸಾಲಿನಲ್ಲಿ ಹಣದುಬ್ಬರ ದರವನ್ನು ಶೇಕಡಾ 5ರಷ್ಟು ಆರ್‌ಬಿಐಯ ವಿತ್ತೀಯ ನೀತಿ ಸಮಿತಿ ಸದಸ್ಯರು ಅಂದಾಜು ಮಾಡಿದ್ದಾರೆ.

**ಸುಭಾಷಿತ :** ಜಗತ್ತಿನ ಪರಮೋಚ್ಚ ಧರ್ಮವೆಂದರೆ ನಮ್ಮ ಮೂಲ ಸ್ವರೂಪದಲ್ಲಿ, ಅಂತಃಸತ್ವದಲ್ಲಿ ನಂಬಿಕೆಯಿಡುವುದು.
– ಸ್ವಾಮಿ ವಿವೇಕಾನಂದ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.


# ಕೊರೋನಾ ಮಹಾಮಾರಿ 2ನೇ ಅಲೆ

## ಜನತೆ ಜಾಗೃತಿ ವಹಿಸಿ ಸೋಂಕು ನಿಯಂತ್ರಿಸಲು ಪ್ರಧಾನಿ ನರೇಂದ್ರ ಮೋದಿ ಮನವಿ

## ಸೋಂಕು ನಿವಾರಣೆಗೆ ಅಗತ್ಯ ಕ್ರಮ - ಬಿ.ಎಸ್. ಯಡಿಯೂರಪ್ಪ





**ನವದೆಹಲಿ :** ಕೋವಿಡ್ ಮಹಾಮಾರಿಯ ಸೋಂಕು ಏಪ್ರಿಲ್ ಮಾಹೆಯಲ್ಲಿ 2ನೇ ಅಲೆಯ ರೂಪದಲ್ಲಿ ತಾಂಡವವಾಡುತ್ತಿದೆ. ದೇಶದ ಜನತೆ ಈ ಮಹಾಮಾರಿಯ ಸೋಂಕಿನಿಂದ ರಕ್ಷಿಸಿಕೊಳ್ಳಲು ಸ್ವಯಂ ನಿರ್ಬಂಧಗಳನ್ನು ವಹಿಸಿ ಜೀವ ರಕ್ಷಣೆ ಜೊತೆಗೆ ಕುಟುಂಬದ ರಕ್ಷಣೆಯನ್ನು ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನತೆಯಲ್ಲಿ ಮನವಿ ಮಾಡಿದ್ದಾರೆ.

ದೇಶದಲ್ಲಿನ ಎಲ್ಲಾ ಆಸ್ಪತ್ರೆಗಳಲ್ಲಿ ಕೊರೋನಾ ಸೋಂಕಿತರಿಗಾಗಿ ಪ್ರತ್ಯೇಕವಾಗಿ ಹಾಸಿಗೆಗಳನ್ನು, ಸುರಕ್ಷಿತ ವೆಂಟಿಲೇಟರ್ ಆಕ್ಸಿಜನ್ ಸೌಲಭ್ಯ ಸೇರಿದಂತೆ ಎಲ್ಲಾ ರೀತಿಯ ಚಿಕಿತ್ಸಾ ಕ್ರಮಗಳನ್ನು ಅನುಸರಿಸುವಂತೆ ಅವರು ಮನವಿ ಮಾಡಿದ್ದಾರೆ. ಪ್ರತಿನಿತ್ಯ ದೇಶದಲ್ಲಿ 3 ಲಕ್ಷಕ್ಕೂ ಅಧಿಕ ಜನರು ಸೋಂಕಿಗೆ ಒಳಪಡುತ್ತಿದ್ದು, ನಿತ್ಯ 3 ಸಾವಿರಕ್ಕೂ ಅಧಿಕ ಜನರು ಸಾವಿಗೀಡಾಗುತ್ತಿರುವುದು ದುರ್ದೈವದ ವಿಚಾರ. ಈ ನಿಟ್ಟಿನಲ್ಲಿ ದೇಶದ ಜನತೆ ಇಂತಹ ಕ್ಲಿಷ್ಟಕರ ಸಂದರ್ಭದಲ್ಲಿ ತಮ್ಮ ಕುಟುಂಬದ ಸದಸ್ಯರನ್ನು ರಕ್ಷಿಸಿಕೊಳ್ಳಬೇಕಾದುದು ಅತ್ಯಗತ್ಯ. ಸಾಮಾಜಿಕ ಅಂತರ, ಅವಶ್ಯವಿದ್ದಲ್ಲಿ ಮನೆಯಿಂದ ಹೊರಬರುವುದು, ಕೆಲಸಗಳನ್ನು ನಿರ್ವಹಿಸುವುದು ಹಾಗೂ ಸ್ಯಾನಿಟೈಸರ್ ಬಳಕೆಗೆ ಒತ್ತು ನೀಡಬೇಕೆಂದು ಅವರು ಸಲಹೆ ಮಾಡಿದ್ದಾರೆ.

ದೇಶದಲ್ಲಿ ಆಕ್ಸಿಜನ್ ಕೊರತೆಯನ್ನು ನಿವಾರಿಸಲು ಹಲವಾರು ಉಪಯುಕ್ತ ಕ್ರಮಗಳನ್ನು ಕೇಂದ್ರ ಸರ್ಕಾರ ಕೈಗೊಳ್ಳುತ್ತಾ ಬಂದಿದೆ. ವಿದೇಶಗಳಿಂದಲೂ ಸಹ ಆಕ್ಸಿಜನ್ ಪೂರೈಕೆಯಾಗುತ್ತಿದ್ದು, ಈ ಸಂಬಂಧ ಎಲ್ಲಾ ರೀತಿಯ ನೆರವು ನೀಡುತ್ತಿರುವ ಹೊರರಾಷ್ಟ್ರಗಳಿಗೆ ಅವರು



ಕೃತಜ್ಞತೆಗಳನ್ನು ಸಮರ್ಪಿಸಿದ್ದಾರೆ.

**ಕರ್ನಾಟಕದಲ್ಲಿ ಕರ್ಫ್ಯೂ ಜಾರಿ :** ಕೊರೋನಾ ಮಹಾಮಾರಿ ಸೋಂಕು ನಿಯಂತ್ರಣಕ್ಕೆ ರಾಜ್ಯ ಸರ್ಕಾರ ವೀಕೆಂಡ್ ಲಾಕ್‌ಡೌನ್ ನಂತರ ದಿನಾಂಕ : 28-4-2021 ರಿಂದ ಮೇ 11 ರವರೆಗೆ ಶಿಸ್ತುಬದ್ಧ ಕರ್ಫ್ಯೂವನ್ನು ಜಾರಿಗೊಳಿಸಿದೆ. ಈ ಸಂಬಂಧ ಜನತೆ ಬೆಳಗ್ಗೆ 6 ರಿಂದ ಬೆಳಗ್ಗೆ 10 ರವರೆಗೆ ಗೃಹೋಪಯೋಗಿ ಬಳಕೆಗೆ ಅಗತ್ಯವಿರುವ ವಸ್ತುಗಳನ್ನು ಖರೀದಿ ಮಾಡಲು ಸರ್ಕಾರ ಅವಕಾಶಗಳನ್ನು ಕಲ್ಪಿಸಿಕೊಟ್ಟಿದೆ ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಅವರು ಘೋಷಿಸಿದ್ದಾರೆ.

ರಾಜ್ಯದಲ್ಲಿ ಪ್ರತಿನಿತ್ಯ 30 ಸಾವಿರಕ್ಕೂ ಅಧಿಕ ಸೋಂಕಿತರು ಪತ್ತೆಯಾಗುತ್ತಿದ್ದು, ಬೆಂಗಳೂರು ಮಹಾನಗರದಲ್ಲಿ ಕೂಡ ಹೆಚ್ಚಿನ ಜನರು ಸೋಂಕಿತರಾಗುತ್ತಿರುವುದರಿಂದ ಸರ್ಕಾರ ಎಲ್ಲಾ ರೀತಿಯ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ. ಎಲ್ಲಾ ಆಸ್ಪತ್ರೆಗಳಲ್ಲಿ ಕೋವಿಡ್ ಕೇರ್ ಸೆಂಟರ್‌ಗಳನ್ನು ತೆರೆದು ಪ್ರತ್ಯೇಕವಾಗಿ ಹಾಸಿಗೆ ಸಹಿತ ಎಲ್ಲಾ ಚಿಕಿತ್ಸಕ ಕ್ರಮಗಳನ್ನು ಕೈಗೊಂಡು ಚಿಕಿತ್ಸೆ ನೀಡಲು ಅವರು ಸಲಹೆ ಮಾಡಿದ್ದಾರೆ.

ಈಗಾಗಲೇ ಜಿಲ್ಲಾ ಉಸ್ತುವಾರಿ ಸಚಿವರುಗಳು ಸಹ ಆಯಾ ಜಿಲ್ಲೆಗಳಲ್ಲಿ ವಾಸ್ತವ್ಯ ಮಾಡಿ ಸೋಂಕು ನಿವಾರಣೆಗೆ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ವೈದ್ಯಕೀಯ, ಕಂದಾಯ, ಪೊಲೀಸ್ ಇಲಾಖೆ ಸೇರಿದಂತೆ ಅಗತ್ಯ ಸೇವೆಗಳನ್ನು ಒಳಗೊಂಡ ಇಲಾಖೆಗಳ ಅಧಿಕಾರಿ ಸಿಬ್ಬಂದಿಗಳು ಕೊರೋನಾ ವಾರಿಯರ್ಸ್‌ಗಳಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ.

# ಎಲ್ಲರೂ ಒಗ್ಗಟ್ಟಾಗೋಣ, ಮಾರ್ಗಸೂಚಿ ಅನುಸರಿಸಿ, ಕೋವಿಡ್ ಮುಕ್ತ ನಾಡು ಕಟ್ಟೋಣ - ಸಚಿವ ಎಸ್.ಟಿ. ಸೋಮಶೇಖರ್ ಮನವಿ

- ಎಲ್ಲರೂ ಸರ್ಕಾರ ಪ್ರಕಟಿಸಿದ ಕೋವಿಡ್ ಮಾರ್ಗಸೂಚಿಗಳನ್ನು ಅನುಸರಿಸಿ.
- ಕೆಲಸ ಇದ್ದರೆ ಮಾತ್ರ ಹೊರಬನ್ನಿ, ಅನಾವಶ್ಯಕ ತಿರುಗಾಟ ಬೇಡ.
- ಸಾಮಾಜಿಕ ಅಂತರ ಕಾಯ್ದುಕೊಳ್ಳಿ, ಮಾಸ್ಕ್, ಸ್ಯಾನಿಟೈಸರ್ ಬಳಸಿ.
- ಅಗತ್ಯಕ್ಕಿಂತ ಹೆಚ್ಚು ಹೊತ್ತು ಒಂದೆಡೆ ನಿಲ್ಲಬೇಡಿ, ಗುಂಪು ಸೇರಲು ಅವಕಾಶ ಕೊಡಬೇಡಿ.



**ಬೆಂಗಳೂರು :** ಕೋವಿಡ್ ಮಹಾಮಾರಿ ನಿಯಂತ್ರಣಕ್ಕೆ ಇಂದು ವಿಶ್ವವೇ ಪರಿತಪಿಸುತ್ತಿದೆ. ಇದಕ್ಕಾಗಿ ಸರ್ಕಾರಗಳು ಅನೇಕ ಕಾರ್ಯಸೂಚಿ, ಕಟ್ಟುನಿಟ್ಟಿನ ಕ್ರಮಗಳನ್ನು ಅನುಸರಿಸುತ್ತಿವೆ. ಆದರೂ ಹತೋಟಿಗೆ ಬರುತ್ತಿಲ್ಲ. ಇದಕ್ಕೆ ನಾಗರಿಕರ ಸಹಭಾಗಿತ್ವವೂ ಮುಖ್ಯವಾಗಲಿದ್ದು, ಎಲ್ಲರೂ ಒಟ್ಟಾಗಿ ಪರಿಸ್ಥಿತಿ ನಿಭಾಯಿಸಬೇಕಿದೆ. ಬನ್ನಿ ಒಗ್ಗಟ್ಟಾಗೋಣ, ಕೋವಿಡ್ ಮುಕ್ತ ನಾಡನ್ನು ಕಟ್ಟೋಣ ಎಂದು ಸಹಕಾರ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅವರು ನಾಗರಿಕರಲ್ಲಿ ಮನವಿ ಮಾಡಿದ್ದಾರೆ.

ರಾಜ್ಯ ಸರ್ಕಾರ ಮಾರ್ಗಸೂಚಿಯನ್ನು ಪ್ರಕಟ ಮಾಡಿದೆ. ಕಟ್ಟುನಿಟ್ಟಿನ ಕ್ರಮಗಳನ್ನು ಸೂಚಿಸಿದೆ. ಎಲ್ಲರೂ ಸರ್ಕಾರ ಪ್ರಕಟಿಸಿದ ಕೋವಿಡ್ ಮಾರ್ಗಸೂಚಿ ಅನುಸರಿಸಿ, ತುರ್ತು ಕೆಲಸ ಇದ್ದರೆ ಮಾತ್ರ ಮನೆಯಿಂದ ಹೊರಬನ್ನಿ, ಅನಾವಶ್ಯಕ ತಿರುಗಾಟ ಬೇಡ, ಸಾಮಾಜಿಕ ಅಂತರ ಕಾಯ್ದುಕೊಳ್ಳಿ, ಮಾಸ್ಕ್, ಸ್ಯಾನಿಟೈಸರ್ ಬಳಸಿ, ಅಗತ್ಯಕ್ಕಿಂತ ಹೆಚ್ಚು ಹೊತ್ತು ಒಂದೆಡೆ ನಿಲ್ಲಬೇಡಿ, ಗುಂಪು ಸೇರಲು ಅವಕಾಶ ಕೊಡಬೇಡಿ. ಕಾರಣ, ಕೊರೋನಾಕ್ಕೆ ಯಾವುದೇ ಭೇದ–ಭಾವ ಇಲ್ಲ ಎಂಬುದನ್ನು ನಾವು ಅರಿತುಕೊಳ್ಳಬೇಕಿದೆ ಎಂದು ಅವರು ಸಲಹೆ ಮಾಡಿದ್ದಾರೆ.

ಸಾರ್ವಜನಿಕರ ಸಹಿತ ಸಂಘ–ಸಂಸ್ಥೆಗಳು, ಸಮಾಜದ ಎಲ್ಲ ವರ್ಗದ ಜನರು, ಜನಪ್ರತಿನಿಧಿಗಳು ಸಹಕಾರ ನೀಡಬೇಕು. ಸರ್ಕಾರ ಸೂಚಿಸಿರುವ ಮಾರ್ಗಸೂಚಿಗಳನ್ನು ಅನುಸರಿಸಬೇಕು. ಲಕ್ಷಣಗಳು ಕಂಡುಬಂದರೆ ತಕ್ಷಣ ಹತ್ತಿರದ ಆಸ್ಪತ್ರೆಗಳಿಗೆ ಭೇಟಿ ನೀಡಿ ಕೋವಿಡ್ ಪರೀಕ್ಷೆಯನ್ನು ಮಾಡಿಸಿಕೊಳ್ಳಬೇಕು. ಸೋಂಕಿತರು ಹೋಂ ಐಸೋಲೇಷನ್ ನಲ್ಲಿದ್ದರೆ ಅಂಥವರು ಕ್ವಾರಂಟೈನ್ ಅವಧಿ ಮುಗಿಯುವವರೆಗೂ ಮನೆಯಲ್ಲೇ ಇದ್ದು, ಅಂತರ ಕಾಯ್ದುಕೊಂಡು ಬೇಗ ಗುಣಮುಖರಾಗಲಿ, ಒಂದು ವೇಳೆ ತೀವ್ರ ಅಸ್ವಸ್ಥರಾದರೆ ತಕ್ಷಣ ಆಸ್ಪತ್ರೆಗೆ ದಾಖಲಾಗಿ ಗುಣಮುಖರಾಗಲಿ, ಹೀಗಾಗಿ ಎಲ್ಲರ ಸಹಕಾರ ಬೇಕು ಎಂದು ಈ ಮೂಲಕ ಅವರು ಮನವಿ ಮಾಡಿದ್ದಾರೆ.

## ಎಟಿಎಂನಿಂದ ಹಣ ಪಡೆಯಲು ವಂಚಕರ ಹೊಸ ತಂತ್ರ




ಎಟಿಎಂಗಳಿಂದ ಅಕ್ರಮವಾಗಿ ಹಣ ಪಡೆಯಲು ಸೈಬರ್ ಅಪರಾಧಿಗಳು ಹೊಸ ಕಾರ್ಯತಂತ್ರ ಅನುಸರಿಸುತ್ತಿದ್ದಾರೆ. ಹೀಗಾಗಿ ನೆಟ್‌ವರ್ಕ್‌ನಲ್ಲಿ ಎಂಡ್–ಟು–ಎಂಡ್ ಎನ್‌ಕ್ರಿಪ್ಷನ್ ವ್ಯವಸ್ಥೆಯ ಮೂಲಕ ಎಟಿಎಂಗಳಲ್ಲಿ ಸುರಕ್ಷತಾ ಕ್ರಮಗಳನ್ನು ಹೆಚ್ಚಿಸುವಂತೆ ಎಲ್ಲಾ ಬ್ಯಾಂಕ್‌ಗಳಿಗೂ ಸರ್ಕಾರ ಆದೇಶ ನೀಡಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸೈಬರ್ ಅಪರಾಧಿಗಳು ಎಟಿಎಂಗಳಿಂದ ಹಣ ಪಡೆಯಲು ಹೊಸ ತಂತ್ರಗಳನ್ನು ಅನುಸರಿಸುತ್ತಿದ್ದಾರೆ ಎನ್ನುವುದು ಸುರಕ್ಷತಾ ಏಜೆನ್ಸಿಗಳು ನಡೆಸಿರುವ ತನಿಖೆಯಿಂದ ತಿಳಿದುಬಂದಿದೆ ಎಂದು ಈ ಕುರಿತು ಮಾಹಿತಿ ಇರುವ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತನಿಖೆಯ ಪ್ರಕಾರ, ವಂಚಕರು ಮೊದಲು ಎಟಿಎಂ ನೆಟ್‌ವರ್ಕ(ಲ್ಯಾನ್) ಕೇಬಲ್ ಅನ್ನು ಬದಲಿಸುತ್ತಾರೆ. ಹೀಗೆ ಮಾಡಿ, ಎಟಿಎಂ ಸ್ವಿಚ್‌ನಿಂದ ಹೊರಡುವ 'ಹಣ ಕೊಡಲು ನಿರಾಕರಿಸುವ' ಸಂದೇಶಗಳನ್ನೇ ಬದಲಾಯಿಸಿ, ಅವು 'ಹಣ ನೀಡುವ ಸಂದೇಶ'ವಾಗಿ ಬದಲಾಗುವಂತೆ ಮಾಡಿ ಅಕ್ರಮವಾಗಿ ಹಣ ಪಡೆಯುತ್ತಿದ್ದಾರೆ. ಅಪರಾಧಿಗಳು ಎಟಿಎಂ ಯಂತ್ರ ಇರುವ ಜಾಗದಲ್ಲಿನ ರೂಟರ್ ಅಥವಾ ಸ್ವಿಚ್ ಮಧ್ಯೆ ಒಂದು ಸಾಧನವನ್ನು ಜೋಡಿಸುತ್ತಾರೆ. ನೆಟ್‌ವರ್ಕ್ ಮೂಲಕ ಎಟಿಎಂ ಸಂಪರ್ಕ ಹೊಂದಿರುವ ಅಧಿಕೃತ ಹೋಸ್ಟ್‌ನಿಂದ (ಎಟಿಎಂ ಸ್ವಿಚ್) ಪ್ರತಿಕ್ರಿಯೆಗಳನ್ನು ಮಾರ್ಪಡಿಸುವ ಸಾಮರ್ಥ್ಯವನ್ನು ಈ ಸಾಧನ ಹೊಂದಿರುತ್ತದೆ. ಬಳಿಕ ವಂಚಕರು ನಿರ್ಬಂಧಿತ ಅಥವಾ ಕಾರ್ಡ್‌ಗಳನ್ನು ಬಳಸಿ ಎಟಿಎಂನಲ್ಲಿ ಹಣ ಪಡೆಯುವ ಪ್ರಕ್ರಿಯೆ ನಡೆಸುತ್ತಾರೆ. ಆಗ ಎಟಿಎಂ ಅದನ್ನು ನಿರಾಕರಿಸುತ್ತದೆ. ಆಗ ಈ ಸಾಧನದ ಮೂಲಕ ವಂಚಕರು ಹಣ ಪಡೆಯಲು ಅನುಮತಿ ನೀಡುವಂತೆ ಸಂದೇಶವನ್ನು ಮಾರ್ಪಡಿಸಿ ಹಣ ದೋಚುತ್ತಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

# 2020-21ನೇ ಸಾಲಿನಲ್ಲಿ 25.67 ಲಕ್ಷ ರೈತರಿಗೆ ರೂ. 17,260 ಕೋಟಿ ಬೆಳೆಸಾಲ ವಿತರಣೆ : ಸಚಿವ ಎಸ್.ಟಿ. ಸೋಮಶೇಖರ್





**ಮುಖ್ಯಮಂತ್ರಿಗಳ ಅಭಿನಂದನೆ :** ರೈತರಿಗೆ ಕಾಲ ಕಾಲಕ್ಕೆ ಸಾಲ ಸೌಲಭ್ಯ ಲಭಿಸಿ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ನೋಡಿಕೊಂಡಿರುವ ಸಹಕಾರ ಸಚಿವರಾದ ಎಸ್.ಟಿ. ಸೋಮಶೇಖರ್ ರವರಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಅಭಿನಂದನೆ ಸಲ್ಲಿಸಿದ್ದಾರೆ.

**ಬೆಂಗಳೂರು :** 2020-21ನೇ ಸಾಲಿನಲ್ಲಿ ರಾಜ್ಯದ 25.67 ಲಕ್ಷ ರೈತರಿಗೆ ರೂ. 17,260.48 ಕೋಟಿ ಬೆಳೆಸಾಲ ವಿತರಿಸಲಾಗಿದ್ದು, ಸರ್ಕಾರ ನಿಗದಿ ಮಾಡಿದ್ದ ಗುರಿಯನ್ನು ಮೀರಿ ಸಾಲ ನೀಡಲಾಗಿದೆ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರು ಹರ್ಷ ವ್ಯಕ್ತಪಡಿಸಿದ್ದಾರೆ.

ಕಳೆದ ಸಾಲಿನಲ್ಲಿ ಒಟ್ಟು 24.36 ಲಕ್ಷ ರೈತರಿಗೆ ಅಲ್ಪಾವಧಿ, ದೀರ್ಘಾವಧಿ ಬೆಳೆ ಸಾಲವಾಗಿ ರೂ.15,300 ಕೋಟಿ ಸಾಲ ವಿತರಿಸುವ ಗುರಿ ಹಾಕಿಕೊಳ್ಳಲಾಗಿತ್ತು. ಮಾರ್ಚ್ 31, 2021ರ ಅಂತ್ಯಕ್ಕೆ ಗುರಿ ಮೀರಲಾಗಿದೆ ಎಂದು ಅವರು ಸುದ್ದಿಗಾರರಿಗೆ ವಿವರಿಸಿದರು.

ಸರ್ಕಾರದ ಇಚ್ಛಾಶಕ್ತಿಯ ಪರಿಣಾಮ 1.31 ಲಕ್ಷಕ್ಕೂ ಅಧಿಕ ರೈತರಿಗೆ ಸಾಲದ ಪ್ರಯೋಜನ ಸಿಕ್ಕಿದೆ. ಇದರಿಂದ ರೂ. 1960.48 ಕೋಟಿ ಸಾಲವನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ಇದೊಂದು ಅಭೂತಪೂರ್ವ ಸಾಧನೆ ಎಂದು ಸಚಿವ ಸೋಮಶೇಖರ್ ಹೇಳಿದರು. ಎಲ್ಲ ರೈತ ಫಲಾನುಭವಿಗಳಿಗೂ ಸಾಲ ಸಿಗಬೇಕು ಎಂಬ ಉದ್ದೇಶದಿಂದ "ಸಹಕಾರಿ ನಡಿಗೆ ಡಿಸಿಸಿ ಬ್ಯಾಂಕ್‌ಗಳ ಕಡೆಗೆ" ಎಂಬ ಚಿಂತನೆಯಡಿ ಪ್ರತಿಯೊಂದು ಜಿಲ್ಲೆಯ ಡಿಸಿಸಿ ಬ್ಯಾಂಕ್‌ಗಳಿಗೆ ಭೇಟಿ ನೀಡಿ ಡಿಸಿಸಿ ಬ್ಯಾಂಕುಗಳ ಕಾರ್ಯಪ್ರಗತಿ ಪರಿಶೀಲನೆ ನಡೆಸಿದ್ದೇನೆ ಎಂದು ಅವರು ಹೇಳಿದರು.

ಅಪೆಕ್ಸ್ ಬ್ಯಾಂಕ್, 21 ಡಿಸಿಸಿ ಬ್ಯಾಂಕ್‌ಗಳು ರೈತರಿಗೆ ಸಾಲ ನೀಡಿಕೆಯ ಬಗ್ಗೆ ಕಳೆದ ಒಂದು ವರ್ಷದಿಂದ ಪ್ರತಿ ದಿನ ಸಂಜೆ 6 ಗಂಟೆಗೆ ರೈತರಿಗೆ ಸಾಲ ನೀಡಿಕೆ ಬಗ್ಗೆ ಪರಿಶೀಲನಾ ಸಭೆ ನಡೆಸಲಾಗುತ್ತಿದೆ. ಈ ವೇಳೆ, ರೈತರಿಗೆ ಎಷ್ಟು ಸಾಲ ಕೊಡಲಾಗುತ್ತಿದೆ. ಹೊಸ ರೈತರಿಗೆ ಎಷ್ಟು ಸಾಲವನ್ನು ವಿತರಣೆ ಮಾಡಲಾಗಿದೆ. ಗುರಿ ಮುಟ್ಟಲಾಗಿದೆ ಎಂಬ ಬಗ್ಗೆ ಮಾಹಿತಿ ಪಡೆಯಲಾಗುತ್ತಿತ್ತು ಎಂದರು.

ಕೋವಿಡ್-19ರ ಹಿನ್ನೆಲೆಯಲ್ಲಿ ಆರ್ಥಿಕ ಸ್ಪಂದನ ಯೋಜನೆಯಡಿ ಬಹುತೇಕ ಡಿಸಿಸಿ ಬ್ಯಾಂಕ್‌ಗಳು ಅಪೆಕ್ಸ್ ಬ್ಯಾಂಕ್‌ಗಳು ಹಾಗೂ ನಬಾರ್ಡ್‌ನಿಂದ ಉತ್ತಮ ಸಾಧನೆ ತೋರಿ, ಶೇ.96ರಷ್ಟು ಗುರಿ ಮುಟ್ಟಲಾಗಿದೆ. ಅಂದರೆ 2020-21 ನೇಸಾಲಿಗೆ ರೂ. 39,072 ಕೋಟಿ ಸಾಲವಿತರಣೆ ಗುರಿ ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ ರೂ. 37,366 ಕೋಟಿ ಸಾಲ ವಿತರಿಸಲಾಗಿದೆ. ಈ ವಿಷಯದಲ್ಲಿ ಇಡೀ ದೇಶದಲ್ಲಿ ಕರ್ನಾಟಕವೇ ಮುಂದಿದೆ ಎಂದು ಸಚಿವರು ಹೇಳಿದರು.

### ಆತ್ಮನಿರ್ಭರ ಯೋಜನೆಯಡಿ ರೂ. 2 ಕೋಟಿ ಸಾಲ

ಆತ್ಮನಿರ್ಭರ ಯೋಜನೆಯಡಿ 1 ಸಾವಿರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಪ್ರತಿ ಸಂಘಕ್ಕೆ ರೂ. 2 ಕೋಟಿಯಂತೆ ಸಾಲ ನೀಡಲು ಅವಕಾಶವಿದ್ದು, ಈ ಪೈಕಿ 1,549 ಸಹಕಾರ ಸಂಘಗಳನ್ನು ಗುರುತಿಸಿ 949 ಪ್ಯಾಕ್ಸ್‌ಗಳಿಗೆ ಪ್ರಸ್ತಾವನೆ ಸಲ್ಲಿಕೆಯಾಗಿತ್ತು. ಇದರಲ್ಲಿ 614 ಪ್ಯಾಕ್ಸ್‌ಗಳಿಗೆ ರೂ. 198.96 ಕೋಟಿ ಮಂಜೂರಾಗಿದೆ ಎಂದು ಸೋಮಶೇಖರ್ ತಿಳಿಸಿದರು.

ಗುರಿ ಮುಟ್ಟದ ಜಿಲ್ಲಾ ಬ್ಯಾಂಕ್‌ಗಳಿಗೆ ನೋಡಲ್ ಅಧಿಕಾರಿಗಳು ವಾರಕ್ಕೊಮ್ಮೆ ಭೇಟಿ ನೀಡಿ ಪ್ರಗತಿ ಸಾಧಿಸಬೇಕೆಂಬ ಸೂಚನೆ ನೀಡಲಾಗಿದೆ ಎಂದು ಸಚಿವ ಸೋಮಶೇಖರ್ ಹೇಳಿದರು.

### ನಾಲ್ಕು ವರ್ಷಗಳಲ್ಲಿ ಬೆಳೆ ಸಾಲ ವಿತರಣೆ

- 2017-18 : 21,04,455 ರೈತರಿಗೆ 11,618.90 ಕೋಟಿ ರೂ.
- 2018-19 : 20,14,951 ರೈತರಿಗೆ 11,350.52 ಕೋಟಿ ರೂ.
- 2019-20 : 22,60,525 ರೈತರಿಗೆ 13,734.47 ಕೋಟಿ ರೂ.
- 2020-21 : 25,67,413 ರೈತರಿಗೆ 17,260 ಕೊಟಿ ರೂ.

# ಸಹಕಾರ ಚುನಾವಣಾ ಪ್ರಾಧಿಕಾರ

**ಟಿ.ಟಿ.ಎಂ.ಸಿ ಕಟ್ಟಡ, 3ನೇ ಮಹಡಿ, ಶ್ರೀ ಕೆಂಗಲ್ ಹನುಮಂತಯ್ಯ ರಸ್ತೆ, ಶಾಂತಿನಗರ, ಬೆಂಗಳೂರು–560017**

ಸಂಖ್ಯೆ:ಸಚುಪ್ರಾ/ಆಡಳಿತ/ಕೋವಿಡ್–19/6(1)/ಸುತ್ತೋಲೆ/2021 ದಿನಾಂಕ : 26.04.2021

## ಚುನಾವಣಾ ತುರ್ತು ಸುತ್ತೋಲೆ

ವಿಷಯ : ರಾಜ್ಯದಲ್ಲಿ ಕೊರೋನಾ ವೈರಸ್ ಹರಡದಂತೆ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ಮುಂದೂಡುವ ಬಗ್ಗೆ.

ಉಲ್ಲೇಖ :
1) ಸರ್ಕಾರದ ಆದೇಶ ಸಂಖ್ಯೆ : ಆರ್.ಡಿ/158/ಟಿ.ಎನ್.ಆರ್/2020 ದಿನಾಂಕ:20.04.2021
2) ಈ ಕಛೇರಿಯ ಸುತ್ತೋಲೆ ಸಂಖ್ಯೆ : ಸಚುಪ್ರಾ/ಆಡಳಿತ/ಕೋವಿಡ್–19/06/ಸುತ್ತೋಲೆ/2021 ದಿನಾಂಕ: 21.04.2021.
3) ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ/158/ಟಿ.ಎನ್.ಆರ್/2020 ದಿನಾಂಕ:21.04.2021.
4) ಸಹಕಾರ ಸಂಘಗಳ ಉಪ ನಿಬಂಧಕರು, ತುಮಕೂರು ಜಿಲ್ಲೆ, ತುಮಕೂರು ಇವರ ಪತ್ರ ಸಂಖ್ಯೆ: ಡಿ.ಆರ್‌ಟಿ/ಜಿಸಚು/ರಿಅನೇ/ಆಮಂ/ತು/111/2021–22 ದಿನಾಂಕ : 26.04.2021
5) ಸಹಕಾರ ಸಂಘಗಳ ಉಪ ನಿಬಂಧಕರು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಪತ್ರ ಸಂಖ್ಯೆ:ಡಿ.ಆರ್/ಡಿವಿಜಿ/ರಿ.ಅ/ಚುನಾವಣೆ/2020–21 ದಿನಾಂಕ : 12.04.2021
6) ಸಹಕಾರ ಸಂಘಗಳ ಉಪ ನಿಬಂಧಕರು, ಕೊಡಗು ಜಿಲ್ಲೆ, ಕೊಡಗು ಇವರ ಪತ್ರ ಸಂಖ್ಯೆ:ಡಿಆರ್‌ಐ/ ಆರ್ ಎಸ್ ಆರ್/ಚುನಾವಣೆ/2021–22 ದಿನಾಂಕ:08.04.2021
7) ಸಹಕಾರ ಸಂಘಗಳ ಉಪ ನಿಬಂಧಕರು, ಬೆಳಗಾವಿ ಜಿಲ್ಲೆ ಬೆಳಗಾವಿ ಇವರ ಪತ್ರ ಸಂಖ್ಯೆ: ಡಿಆರ್ ಎಲ್/ಚುನಾವಣೆ/23/2021–22 ದಿನಾಂಕ:26.04.2021
8) ಸಹಕಾರ ಸಂಘಗಳ ಉಪನಿಬಂಧಕರು, ಧಾರವಾಡ ಜಿಲ್ಲೆ, ಧಾರವಾಡ ಇವರ ಪತ್ರ ಸಂಖ್ಯೆ: ಡಿಆರ್ ಜಡ್/ಚುನಾವಣೆ/ಸಿಆರ್/ 2021–22 ದಿನಾಂಕ: 26.04.2021

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಆದೇಶ ದಿನಾಂಕ:20.04.2021ರ ಆದೇಶದಂತೆ ಕೋವಿಡ್–19 ಸಾಂಕ್ರಾಮಿಕ ರೋಗದ ಹರಡುವಿಕೆಯನ್ನು ತಡೆಯುವ ಸಲುವಾಗಿ ವಿವಿಧ ಚಟುವಟಿಕೆಗಳಿಗೆ ನಿರ್ಬಂಧಗಳನ್ನು ವಿಧಿಸಿದ್ದು, ಅದರಲ್ಲಿ ವಾರಾಂತ್ಯ ಅಂದರೆ ಶುಕ್ರವಾರ ರಾತ್ರಿ 9–00 ಘಂಟೆಯಿಂದ ಸೋಮವಾರ ಬೆಳಿಗ್ಗೆ 6–00 ಘಂಟೆಯವರೆಗೆ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿರುತ್ತದೆ ಹಾಗೂ ಈ ಸಂಬಂಧವಾಗಿ ಕಛೇರಿಯಲ್ಲಿ ಶೇಕಡ 50ರಷ್ಟು ಸಿಬ್ಬಂದಿಗಳು ಹಾಜರಾತಿ ಇರತಕ್ಕದ್ದು ಮತ್ತು ಉಳಿದ ಶೇಕಡ 50ರಷ್ಟು ಸಿಬ್ಬಂದಿಗಳು ಕೋವಿಡ್–19ರ ಕರ್ತವ್ಯದಲ್ಲಿ ಕಾರ್ಯನಿರ್ವಹಿಸುವಂತೆ ನಿರ್ದೇಶನವಿರುತ್ತದೆ.

ಸದರಿ ಆದೇಶದಂತೆ ಸಹಕಾರ ಸಂಘಗಳಿಗೆ/ಸಹಕಾರಿಗಳಿಗೆ ಈ ಅವಧಿಯಲ್ಲಿ (ಶನಿವಾರ–ಭಾನುವಾರ) ನಿಗದಿಯಾಗಿದ್ದ ಎಲ್ಲಾ ಚುನಾವಣೆಗಳನ್ನು ಈ ಕಛೇರಿಯ ಉಲ್ಲೇಖ (2)ರ ಸುತ್ತೋಲೆಯಂತೆ ಮುಂದೂಡಿ ಅಂತಹ ಚುನಾವಣೆಗಳನ್ನು ಬೇರೆ ದಿನಾಂಕಗಳಂದು ಮಾಡಲು ತಿಳಿಸಲಾಗಿರುತ್ತದೆ.

ಕೋವಿಡ್–19 ಸಾಂಕ್ರಾಮಿಕ ರೋಗ ಹರಡುವಿಕೆಯನ್ನು ಗಮನಿಸಲಾಗಿ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅದರಲ್ಲೂ ಬೆಂಗಳೂರು ನಗರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹರಡುತ್ತಿದ್ದು ದಿನಾಂಕ:25.04.2021 ರಂದು ರಾಜ್ಯದಲ್ಲಿ 34,804 ಪ್ರಕರಣಗಳು ದಾಖಲಾಗಿದ್ದು, ಈ ಪೈಕಿ ಬೆಂಗಳೂರಿನಲ್ಲಿ ಸುಮಾರು 20,733 ಪ್ರಕರಣಗಳು ದಾಖಲಾಗಿರುತ್ತದೆ. ಆದ್ದರಿಂದ ಇಂತಹ ಪರಿಸ್ಥಿತಿಯಲ್ಲಿ ಸಹಕಾರ ಸಂಘಗಳ/ ಸಹಕಾರಿಗಳ ಚುನಾವಣೆಗಳನ್ನು ಮುಂದುವರೆಸುವುದು ಸೂಕ್ತವೇ ಎಂಬುದನ್ನು ಪರಿಶೀಲಿಸಲಾಗಿದೆ.

ಇದಕ್ಕೆ ಪೂರಕವಾಗಿ ಉಲ್ಲೇಖ(2)ರ ಪರಿಷ್ಕೃತ ಸರ್ಕಾರದ ಆದೇಶ ದಿನಾಂಕ:21.04.2021ರಂತೆ ನಿಷೇಧಿಸಲಾದ ಚಟುವಟಿಕೆಗಳಲ್ಲಿ ಮತ್ತು ಇತರೆ ಚಟುವಟಿಕೆಗಳಿಗಾಗಿ ಒಗ್ಗೂಡುವಿಕೆ ಹಾಗೂ ದೊಡ್ಡ ಪ್ರಮಾಣದ ಸಮೂಹ ಸೇರುವಿಕೆಯನ್ನು ನಿಷೇಧಿಸಲಾಗಿರುತ್ತದೆ. ಸಹಕಾರ ಸಂಘಗಳ /ಸಹಕಾರಿಗಳ ಚುನಾವಣೆಯಲ್ಲಿ ಹೆಚ್ಚಿನ ಜನರು ಚುನಾವಣಾ ಪ್ರಚಾರ ಕಾರ್ಯದಲ್ಲಿ ಮತ್ತು ಚುನಾವಣೆಯ ದಿನಾಂಕದಂದು ಒಂದೇ ಸ್ಥಳದಲ್ಲಿ ಗುಂಪುಗೂಡುವ ಸಂದರ್ಭಗಳು ಹೆಚ್ಚಾಗಿರುತ್ತವೆ.

ಮುಂದುವರೆದು, ಉಲ್ಲೇಖ (3), (4), (5), (6), (7) ಮತ್ತು (8)ಗಳ ಚುನಾವಣಾಧಿಕಾರಿಗಳು ಚುಣಾವಣೆ ನಡೆಯಬೇಕಾದ ಸಹಕಾರ ಸಂಘಗಳ ರಿಟರ್ನಿಂಗ್ ಅಧಿಕಾರಿಗಳ ವರದಿಗಳನ್ನು ಪರಿಶೀಲಿಸಿ ರಿಟರ್ನಿಂಗ್ ಅಧಿಕಾರಿಗಳು ಕೋವಿಡ್–19ರ ಸಾಂಕ್ರಾಮಿಕ ರೋಗದ ಹರಡುವಿಕೆಯನ್ನು ತಡೆಗಟ್ಟುವ ದೃಷ್ಟಿಯಿಂದ ಚುನಾವಣೆಯನ್ನು ನಡೆಸುವುದು ಸೂಕ್ತವಲ್ಲವೆಂದು ಅಭಿಪ್ರಾಯಿಸಿ ಚುನಾವಣೆಗಳನ್ನು ಮುಂದೂಡುವ ಬಗ್ಗೆ ಸಹಕಾರ ಚುನಾವಣಾ ಪ್ರಾಧಿಕಾರದ ಅನುಮತಿಯನ್ನು ಕೋರಿರುತ್ತಾರೆ ಎಂದು ತಿಳಿಸಿರುತ್ತಾರೆ ಮತ್ತು ಇತರೆ ಸಹಕಾರಿ ಸಂಘಗಳ ಪದಾಧಿಕಾರಿಗಳು ದೂರವಾಣಿ ಮುಖಾಂತರ ಚುನಾವಣೆ ಮುಂದೂಡಲು ಕೋರುತ್ತಿದ್ದಾರೆ.

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 14–ಹೆಚ್ ಮತ್ತು ಕರ್ನಾಟಕ ಸೌಹಾರ್ಧ ಸಹಕಾರಿ ನಿಯಮ 2004ರ ನಿಯಮ 5–ಎಂ ಗಳಂತೆ ನೈಸರ್ಗಿಕ ವಿಪತ್ತಿನಿಂದ ಚುನಾವಣೆಗಳನ್ನು ಆಯಾ ಚುನಾವಣೆಗಳ ರಿಟರ್ನಿಂಗ್ ಅಧಿಕಾರಿಗಳ ವರದಿಯಂತೆ ಚುನಾವಣೆಗಳನ್ನು ಮುಂದೂಡಲು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಅಧಿಕಾರವಿರುತ್ತದೆ.

ಈಗಾಗಲೇ ಉಲ್ಲೇಖ(1) ಮತ್ತು (2)ರ ಆದೇಶಗಳಂತೆ ಕೋವಿಡ್–19 ಸಾಂಕ್ರಾಮಿಕ ರೋಗವು ನೈಸರ್ಗಿಕ ವಿಪತ್ತು ಎಂದು ಪರಿಗಣಿಸಿ ಕೋವಿಡ್–19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟಲು ಕಲಂ 24ರ ವಿಪತ್ತು ನಿರ್ವಹಣಾ ಕಾಯ್ದೆ 2005 ರಡಿ ನಿರ್ಬಂಧಗಳನ್ನು ವಿಧಿಸಲಾಗಿರುತ್ತದೆ.

ಮೇಲೆ ವಿವರಿಸಿರುವ ಕಾರಣಗಳು ಹಾಗೂ ರಾಜ್ಯದ ಎಲ್ಲಾ ಪ್ರದೇಶಗಳಲ್ಲೂ ಕೋವಿಡ್–19 ಸಾಂಕ್ರಾಮಿಕ ರೋಗವು ಹರಡುತ್ತಿದ್ದು ಮತ್ತು ಕಂಡಿಕೆ (1) ರಲ್ಲಿ ವಿವರಿಸಿರುವಂತೆ ಶೇಕಡ 50 ರಷ್ಟು ಸಿಬ್ಬಂದಿಗಳು ಕರೋನಾ ನಿರ್ವಹಣೆ ಕೆಲಸದಲ್ಲಿ ತೊಡಗಿಸಿಕೊಳ್ಳಲು ಆದೇಶವಿದ್ದು, ಚುನಾವಣಾ ಕರ್ತವ್ಯಕ್ಕೆ ಬೇಕಾದ ಸಿಬ್ಬಂದಿಗಳ ಕೊರತೆಯು ಉಂಟಾಗಿರುವುದರಿಂದ ರಾಜ್ಯದಲ್ಲಿ 2021ನೇ ಸಾಲಿನಲ್ಲಿ ಸಹಕಾರ ಸಂಘಗಳಿಗೆ / ಸೌಹಾರ್ಧ ಸಹಕಾರಿಗಳಿಗೆ ನಡೆಯಬೇಕಾಗಿದ್ದ ಚುನಾವಣೆಗಳನ್ನು ಮುಂದಿನ ಆದೇಶದವರೆಗೆ ಮುಂದೂಡಲಾಗಿರುತ್ತದೆ ಎಂದು ತಿಳಿಸಿದೆ.

**(ಡಾ. ಎನ್.ಎಸ್. ಚನ್ನಪ್ಪಗೌಡ)**

ಆಯುಕ್ತರು

ಸಹಕಾರ ಚುನಾವಣಾ ಪ್ರಾಧಿಕಾರ

ಬೆಂಗಳೂರು–27

ಪ್ರಗತಿ ಪಥ

# ಪ್ರಗತಿ ಪಥದಲ್ಲಿ ಸಾಗುತ್ತಿದೆ...

# ಕೆನರಾ ಬ್ಯಾಂಕ್ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ನೌಕರರ ಪತ್ತಿನ ಸಹಕಾರ ಸಂಘ

# ರಜತ ಮಹೋತ್ಸವ ಸಂಭ್ರಮಾಚರಣೆ ಸಾರ್ಥಕ ಸೇವೆ

ಸಹಕಾರ ಕ್ಷೇತ್ರ ಪ್ರಜಾಪ್ರಭುತ್ವದ ತಳಹದಿಯ ಮೇಲೆ ಕೆಲಸ ಮಾಡುತ್ತದೆ. ಪ್ರಜಾಪ್ರಭುತ್ವ ಸಿದ್ಧಾಂತಗಳ ಸ್ವರೂಪವೇ ಸಹಕಾರ ತತ್ವಗಳಾಗಿದ್ದು, ಪ್ರತಿ ನಾಗರಿಕನಲ್ಲೂ ಎಲ್ಲರೂ ಸಮಾನರು ಎಂಬ ಭಾವನೆಯನ್ನು ಮೂಡುವಂತೆ ಪ್ರೇರೆಪಿಸುತ್ತದೆ. ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ಸಮಾಜದ ಮುಖ್ಯವಾಹಿನಿಗೆ ತರಲು ಪ್ರಯತ್ನಿಸುತ್ತದೆ. ದೇಶವನ್ನು ಆರ್ಥಿಕವಾಗಿ ಸದೃಢಗೊಳಿಸುವ ಶಕ್ತಿ ಸಹಕಾರಿ ರಂಗಕ್ಕಿದ್ದು, ದೇಶದ ಸಹಕಾರ ಸಂಘ ಸಂಸ್ಥೆಗಳು ಆರ್ಥಿಕ ಶೋಷಿತರ ಜೊತೆಗೆ ರೈತ, ಮಹಿಳೆ, ಯುವಜನ, ನೌಕರ ಹೀಗೆ ಎಲ್ಲಾ ರಂಗದವರಲ್ಲಿ ಆರ್ಥಿಕ ಚೈತನ್ಯ ತುಂಬುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ಭಾರತದ ಪ್ರಮುಖ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಕೆನರಾ ಬ್ಯಾಂಕ್ ಸಹ ಒಂದು. 1906ರಂದು ಮಂಗಳೂರಿನಲ್ಲಿ ಪ್ರಾರಂಭವಾದ ಬ್ಯಾಂಕು ಇಂದು ಭಾರತವಲ್ಲದೇ ಲಂಡನ್, ಮಾಸ್ಕೋ, ಹಾಂಗ್ ಕಾಂಗ್, ದುಬೈ ಸೇರಿದಂತೆ ಹಲವು ರಾಷ್ಟ್ರಗಳಲ್ಲಿ ತನ್ನ ಶಾಖೆಗಳನ್ನು ಹೊಂದಿರುವುದು ಹೆಮ್ಮೆಯ ವಿಚಾರ. ಭಾರತ ಸರ್ಕಾರ 1969ರಲ್ಲಿ ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಣ ಗೊಳಿಸಿತು. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮೀಸಲಾತಿ ಮೂಲಕ ಉದ್ಯೋಗಕ್ಕೆ ಅವಕಾಶ ಮಾಡಿಕೊಟ್ಟಿತು. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಮೀಸಲಾತಿಯ ಆಧಾರದಲ್ಲಿ ಕೆನರಾ ಬ್ಯಾಂಕಿನಲ್ಲಿ ನೌಕರಿ ಮಾಡುವ ಸದಾವಕಾಶ ದೊರಕಿತು.

| ಪ್ರಗತಿಯ ಪಕ್ಷಿನೋಟ | |
|---|---|
| ಸದಸ್ಯರು | 596 |
| ಶೇರುಬಂಡವಾಳ | 68,86,691/– |
| ಆಪದ್ಧನ ನಿಧಿ | 37,31,193/– |
| ಖಾಯಂಠೇವಣಿ | 77,00,000/– |
| ವಿಶೇಷ ಖಾಯಂಠೇವಣಿ | 1,35,52,204/– |
| ಸಾಲಗಳು | 4,73,19,511/– |
| ನಿವ್ವಳ ಲಾಭ | 15,29,661/– |
| ಆಡಿಟ್ ವರ್ಗೀಕರಣ | ‘ಅ’ |


ಶ್ರೀ ಎಫ್.ಹೆಚ್. ಜಕ್ಕಪ್ಪನವರ್
ಸಂಸ್ಥಾಪಕರು

ಕೆನರಾ ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ನೌಕರರ ಹಿತಾಸಕ್ತಿ ಸಾಧಿಸುವ ಉದ್ದೇಶದೊಂದಿಗೆ, 1979ರಲ್ಲಿ ಬೆಂಗಳೂರು, ಹುಬ್ಬಳ್ಳಿ, ಬೆಳಗಾವಿ, ಕಲಬುರಗಿ, ದಾವಣಗೆರೆ ಜಿಲ್ಲೆಗಳ ನೌಕರರೆಲ್ಲ ಸೇರಿಮೊಟ್ಟ ಮೊದಲ ಬಾರಿಗೆ ಅಖಿಲ ಭಾರತ ಕೆನರಾ ಬ್ಯಾಂಕ್ ಪ.ಜಾ/ ಪ.ಪಂ. ನೌಕರರ ಸಂಘವನ್ನು ಸ್ಥಾಪಿಸಿದರು.

ಮುಖ್ಯವಾಗಿ ಪುರುಷೋತ್ತಮದಾಸ್ ಅಧ್ಯಕ್ಷರಾಗಿ, ಎಫ್.ಹೆಚ್. ಜಕ್ಕಪ್ಪನವರ್ ಪ್ರಧಾನ ಕಾರ್ಯದರ್ಶಿಯಾಗಿ, ಬಿ.ಟಿ. ಗೋಪಾಲಕೃಷ್ಣ ಸಂಘಟನಾ ಕಾರ್ಯದರ್ಶಿಯಾಗಿ, ಎಮ್. ವರದರಾಜು ಖಜಾಂಚಿಯಾಗಿ, ಚಿಕ್ಕಣ್ಣ ಜಂಟೀ ಕಾರ್ಯದರ್ಶಿಯಾಗಿ ಹಾಗೂ ಬಿ.ಎಂ. ಮುನಿರಾಜು ಉಪ ಪ್ರಧಾನ ಕಾರ್ಯದರ್ಶಿಯಾಗಿ ಸಂಘದ ಪ್ರಾರಂಭದ ದಿನಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಸಂಘವು ಹಲವಾರು ಏರಿಳಿತಗಳ ನಡುವೆಯು ಸಾರ್ಥಕ ಸೇವೆ ಸಲ್ಲಿಸುತ್ತಾ ಮುನ್ನಡೆದಿದೆ. ಸದ್ಯ ಸಂಘದ ಆರ್ಥಿಕ ಪರಿಸ್ಥಿತಿ ಉತ್ತಮವಾಗಿದ್ದು, ಸಂಘದ ಕಾರ್ಯ ವೈಖರಿ, ಸೇವೆಗಳ ಬಗ್ಗೆ ತಿಳಿದು ಇತ್ತೀಚೆಗೆ ಸಂಘಕ್ಕೆ ಭೇಟಿ ನೀಡಲಾಯಿತು.

ಹಾಲಿ ನಿರ್ದೇಶಕ ಮಂಡಲಿ



# ಉತ್ತಮ ಆಡಳಿತ, ಪರಸ್ಪರ ವಿಶ್ವಾಸ ಹಾಗೂ ಗುಣಮಟ್ಟದ ಸೇವೆಯಿಂದ ಮಾತ್ರ ಅಭಿವೃದ್ಧಿ ಸಾಧ್ಯ : ಸಂದರ್ಶನದಲ್ಲಿ ಡಾ. ಆರ್. ಗುರುಸ್ವಾಮಿ ಅಭಿಪ್ರಾಯ

ಸಹಕಾರವು ಆರ್ಥಿಕ ಸುಧಾರಣೆಯ ಮಂತ್ರವಾಗಿದೆ. ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳ ನಿವಾರಣೆಗೆ ಸಾಧನವಾಗಿರುವ ಈ ಕ್ಷೇತ್ರ ವಿವಿಧ ವಲಯಗಳ ನೌಕರರಿಗೂ ಸಹ ತಮ್ಮ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳನ್ನು ಸುಧಾರಣೆ ಮಾಡಿಕೊಳ್ಳುವ ಸದಾವಕಾಶ ಒದಗಿಸಿಕೊಟ್ಟಿದೆ.

ಆದ್ದರಿಂದಾಗಿಯೇ ಇಂದು ಎಲ್ಲರಂಗದ ನೌಕರರು ಸಹಕಾರ ಕಕ್ಷೆಯೊಳಗೆ ಬಂದು, ತಮ್ಮ ಆರ್ಥಿಕ ಅಭಿವೃದ್ಧಿಗೆ ಪತ್ತಿನ ಸಹಕಾರ ಸಂಘಗಳನ್ನು ಕಟ್ಟಿಕೊಂಡಿದ್ದಾರೆ. ಅವುಗಳು ಇಂದು ಉತ್ತಮವಾಗಿ ಕಾರ್ಯನಿರ್ವಹಿಸಿ ಸದಸ್ಯ ಪ್ರಶಂಸೆಗೂ ಪಾತ್ರವಾಗಿವೆ.

ನೌಕರರ ಪತ್ತಿನ ಸಹಕಾರ ಸಂಘಗಳನ್ನು ಸೇವಾ ಮನೋಭಾವನೆಯ ಮೂಲಕ ಬದ್ದತೆ ಹಾಗೂ ಪ್ರಾಮಾಣಿಕ ಪ್ರಯತ್ನದಿಂದ ಪ್ರಗತಿಯ ಹಾದಿಯಲ್ಲಿ ಸಾಗುವಂತೆ ಶ್ರಮಿಸುತ್ತಿರುವ ಸಂಘದಅಧ್ಯಕ್ಷರ ಸೇವೆ ಮೆಚ್ಚುವಂತಹದ್ದು, ಇಂಹತ ನೌಕರ ಸಹಕಾರಿಗಳಲ್ಲಿ ಕೆನರಾ ಬ್ಯಾಂಕ್ ಪ.ಜಾ / ಪ.ಪಂ ನೌಕರರ ಪತ್ತಿನ ಸಹಕಾರಿ ಸಂಘದಅಧ್ಯಕ್ಷರಾದಡಾ. ಆರ್. ಗುರುಸ್ವಾಮಿರವರು ಒಬ್ಬರು.

ಡಾ. ಆರ್. ಗುರುಸ್ವಾಮಿರವರು ಬೆಂಗಳೂರಿನ ಕೆನರಾ ಬ್ಯಾಂಕಿನ ಕೇಂದ್ರ ಕಛೇರಿಯ ನೌಕರರಾಗಿ ಕಾರ್ಯ ನಿರ್ವಹಿಸುತ್ತಿದ್ದು ಕ್ರೀಡೆ, ಸಾಮಾಜಿಕ, ರಾಜಕೀಯ ಹಾಗೂ ಸಹಕಾರ ಕ್ಷೇತ್ರದ ಮೇಲೆ ವಿಶೇಷ ಆಸಕ್ತಿ ಉಳ್ಳವರಾಗಿದ್ದಾರೆ. ವಿದ್ಯಾರ್ಥಿ ದಿಸೆಯಿಂದಲೇ ಸಂಘಟನೆ ಹಾಗೂ ಹೋರಾಟ ಮನೋಭಾವನೆ ಬೆಳೆಸಿಕೊಂಡಿರುವ ಇವರು ಅತಿ ಕಡಿಮೆ ಅವಧಿಯಲ್ಲಿ ಸಂಘವನ್ನು ಅಭಿವೃದ್ಧಿಯ ಉತ್ತುಂಗ ಶಿಖರವನ್ನು ಮುಟ್ಟುವಂತೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ಶ್ರೀಯುತರು ಸಹಕಾರ ಪತ್ರಿಕೆಯೊಂದಿಗೆ ತಮ್ಮ ಮನದಾಳದ ಮಾತುಗಳನ್ನಾಡಿದ್ದಾರೆ...

### 1. ಸಂಘದ ಸ್ಥಾಪನೆಯ ಉದ್ದೇಶ...

ಅಂದು ನಮ್ಮ ಕ್ಷೇತ್ರದಲ್ಲಿ ಅನೇಕ ಹಣಕಾಸಿನ ಸಂಸ್ಥೆಗಳಿದ್ದರೂ ಸಹ, ಅಲ್ಲಿನ ಆಡಳಿತ ಪ.ಜಾ / ಪ.ಪಂ ನೌಕರರನ್ನು ನಿರ್ಲಕ್ಷಿಸುತ್ತಿದ್ದವು. ಹೀಗಾಗಿ ಪ.ಜಾ/ಪ.ಪಂ ನೌಕರರು ಆರ್ಥಿಕ ನೆರವು ಸಿಗದೆ ವಂಚಿತರಾಗಿದ್ದರು. ಇಂತಹ ಸಂದರ್ಭದಲ್ಲಿ ನಮ್ಮ ಹಿಂದಿನ ನಾಯಕರಾದ ಎಫ್.ಹೆಚ್. ಜಕ್ಕಪ್ಪನವರ್, ಬಿ.ಟಿ. ಗೋಪಾಲಕೃಷ್ಣ, ಎಮ್. ವರದರಾಜು ಹಾಗೂ ಬಿ.ಎಂ. ಮುನಿರಾಜು ರವರುಗಳೆಲ್ಲಾ 1992ರಲ್ಲಿ ಪತ್ತಿನ ಸಂಘವನ್ನು



ಸ್ಥಾಪಿಸಬೇಕೆಂಬ ನಿಲುವನ್ನು ತಾಳಿದರು.ಆದರೆ ಇದು ಸಹ ಸುಲಭದ ಕೆಲಸವಾಗಿರಲಿಲ್ಲ.

ಸಹಕಾರ ಇಲಾಖೆಯು ಸಂಘದ ನೋಂದಣಿಗಾಗಿ ಕೆನರಾ ಬ್ಯಾಂಕಿನ ಆಡಳಿತ ಮಂಡಳಿಯ ಅನುಮತಿ ಕೇಳಿತು. ಜೊತೆಗೆ ನಮ್ಮ ಕ್ಷೇತ್ರದ ಎಲ್ಲ ಯೂನಿಯನ್ನುಗಳು ನಮ್ಮ ಹೊಸ ಪತ್ತಿನ ಸಹಕಾರ ಸಂಘ ಸ್ಥಾಪನೆಯ ಅನುಮತಿಗೆ ಬಲವಾದ ವಿರೋಧ ವ್ಯಕ್ತಪಡಿಸಿದ್ದವು. ಹೀಗೆ ಹಲವು ರಾಜಕೀಯ ಹಾಗೂ ಕಾನೂನಿನ ಹೋರಾಟಗಳ ಜೊತೆಗೆ ಅಂದಿನ ಸಹಕಾರ ಸಚಿವರಾಗಿದ್ದ ಕೆ.ಎಚ್. ಪಾಟೀಲರು ಹಾಗೂ ಸಹಕಾರಇಲಾಖೆಯ ಉಪ ಕಾರ್ಯದರ್ಶಿಯಾಗಿದ್ದ ಕೆ. ಶಿವರಾಮ ರವರ ಸಹಕಾರದಿಂದ ಅಂತಿಮವಾಗಿ ಕೆನರಾ ಬ್ಯಾಂಕ್ ಪ.ಜಾ./ ಪ.ಪಂ. ನೌಕರರ ಪತ್ತಿನ ಸಹಕಾರಿ ಸಂಘದ ನೋಂದಣಿಗೆ ಮತ್ತು ಶೇರು ಸಂಗ್ರಹಣೆಗೆ ಅನುಮತಿ ದೊರೆಯಿತು. ಇದರ ಮುಂದಾಳತ್ವವನ್ನು ಎಫ್.ಹೆಚ್. ಜಕ್ಕಪ್ಪನವರ್ ವಹಿಸಿದ್ದರು.

1995 ರಿಂದ ಸಂಘವನ್ನು ಪ್ರಾರಂಭಿಸಿದೆವು. ಸಂಘದ ಮೊದಲ ಅಧ್ಯಕ್ಷರಾಗಿ ಸಿ.ಹೆಚ್. ಮೂರ್ತೆಣ್ಣವರ, ನಂತರ ಮಲ್ಲೇಶಿ ರವರುಗಳು ಸೇವೆಸಲ್ಲಿಸಿದ್ದಾರೆ.

### 2. ಸಂಘದಪ್ರಾರಂಭದ ದಿನಗಳು...

ಪ್ರಾರಂಭದಲ್ಲಿ ನಾನು ಸಂಘದ ಉಪಾಧ್ಯಕ್ಷನಾಗಿದ್ದೆ. ಮೊದಲಿಗೆ ಠೇವಣಿ ಸಂಗ್ರಹಣೆಯಲ್ಲಿ ಸಮಸ್ಯೆಗಳನ್ನು ಎದುರಿಸಿದ್ದರೂ ಕೂಡಾ, ಕ್ರಮೇಣ ಠೇವಣಿ ಸಂಗ್ರಹಣೆಯಲ್ಲಿ ಸಫಲರಾಗಿದ್ದೇವೆ. ಏಕೆಂದರೆ, ನಮ್ಮ ನೌಕರರಲ್ಲಿ ಠೇವಣಿಯಿಡಲು ಹಣದ ಕೊರತೆಯಿರಲಿಲ್ಲ. ಆದರೆ, ನಂಬಿಕೆಯ ಕೊರತೆ ಇತ್ತು. ಇಂತಹ ಸಂದರ್ಭದಲ್ಲಿ ನಾವು ನಮ್ಮ

13ನೇ ಪುಟಕ್ಕೆ...

## ಕೊರೋನಾ ಮಹಾಮಾರಿಯ ನಡುವೆಯೂ

# ದಾಖಲೆಯ ವ್ಯವಹಾರ ಸಾಧಿಸಿದ ಮಂಗಳೂರಿನ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ



ಕೆ. ಜೈರಾಜ್ ಬಿ. ರೈ.
ಅಧ್ಯಕ್ಷರು

**ಮಂಗಳೂರು :** ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯು ಕೋವಿಡ್–19ರ ಪಿಡುಗಿನ ನಡುವೆಯು ಲಾಕ್‌ಡೌನ್‌ನ ಪರಿಣಾಮಗಳನ್ನು ಎದುರಿಸಿ 2020–21 ಸಾಲಿನಲ್ಲಿ ಹಿಂದಿನ ವರ್ಷಗಳಂತೆ ಒಟ್ಟು ವ್ಯವಹಾರದಲ್ಲಿ ಸಾರ್ವಕಾಲಿಕ ಹೆಚ್ಚಳ ದಾಖಲಿಸಿಕೊಂಡು ಎಲ್ಲಾ ಕಾರ್ಯ ವಿಭಾಗದಲ್ಲಿ ನಿಗದಿತ ಗುರಿ ಮೀರಿದ ಸಾಧನೆ ಮಾಡಿ, ಅತ್ಯುತ್ತಮ ಪ್ರಗತಿ ಕಾಯ್ದುಕೊಂಡಿದೆ ಎಂದು ಸಂಘದ ಅಧ್ಯಕ್ಷರಾದ ಕೆ. ಜೈರಾಜ್ ಬಿ. ರೈ ಅವರು ತಿಳಿಸಿದ್ದಾರೆ.

ಕಳೆದ ವರ್ಷದಲ್ಲಿ ಇದ್ದ ಎಲ್ಲಾ ಅನಿಶ್ಚಿತತೆಗಳ ನಡುವೆಯೂ, ಸಂಘವು ತನ್ನ ಎಲ್ಲಾ ಕಾರ್ಯವಿಭಾಗಗಳಲ್ಲಿ ಅತ್ಯುತ್ತಮ ಪ್ರಗತಿ ಹೊಂದಿ, ಹೆಚ್ಚುವರಿ 73 ಕೋಟಿ ರೂ.ಗಳ ಠೇವಣಿಗಳನ್ನು ಹೊಂದುವುದರ ಮೂಲಕ ದಾಖಲೆಯ ವ್ಯವಹಾರ ನಡೆಸಿ ಅಂದಾಜು 7.31 ಕೋಟಿ ರೂ.ಗಳ ಲಾಭ ಗಳಿಸಿದೆ.

ಈ ಲಾಭವು ಕಳೆದ ವರ್ಷಕ್ಕಿಂತ ಹೆಚ್ಚುವರಿ 1.09 ಕೋಟಿ ರೂ.ಗೂ ಅಧಿಕ ಲಾಭ ಗಳಿಸಿರುವುದು ಕೂಡ ಸಂಘದ ಪ್ರಗತಿಯ ಮೈಲುಗಲ್ಲಾಗಿದೆ ಎಂದು ಅವರು ತಿಳಿಸಿದ್ದಾರೆ.

**ಸಂಘವು 31.03.2021ಕ್ಕೆ ಸಾಧಿಸಿದ ಪ್ರಗತಿ ಪ್ರಗತಿ ವಿವರದ ಪಕ್ಷಿನೋಟ ಈ ಕೆಳಗಿನಂತಿದೆ**
**(ಅಂಕಿ ಅಂಶಗಳು ಲೆಕ್ಕಪರಿಶೋಧನೆಗೆ ಒಳಪಟ್ಟು)**

| | ಕಾರ್ಯ ವಿಭಾಗ | ಮಾರ್ಚ್ 2020ಕ್ಕೆ ಇದ್ದಂತೆ (ರೂ) | ಮಾರ್ಚ್ 2021ಕ್ಕೆ ಇದ್ದಂತೆ (ರೂ) | ಶೇ. ವೃದ್ಧಿ |
|---|---|---|---|---|
| 1 | ಠೇವಣಾತಿಗಳು | ರೂ.236 ಕೋಟಿ | ರೂ.309 ಕೋಟಿ | 31% |
| 2 | ಸಾಲ ಮತ್ತು ಮುಂಗಡ | ರೂ.195 ಕೋಟಿ | ರೂ.252 ಕೋಟಿ | 29% |
| 3 | ಒಟ್ಟು ವ್ಯವಹಾರ | ರೂ.431 ಕೋಟಿ | ರೂ.561 ಕೋಟಿ | 30% |
| 4 | ನಿವ್ವಳ ಲಾಭ | ರೂ.6.22 ಕೋಟಿ | ರೂ.7.31 ಕೋಟಿ | 18% |
| 5 | ಅನುತ್ಪಾದಕ ಆಸ್ತಿ (Absolute) | ರೂ.16 ಲಕ್ಷ | ರೂ.14 ಲಕ್ಷ | – |
| | ಶೇಕಡಾವಾರು | 0.08% | 0.06% | – |
| 6 | ನಿವ್ವಳ ಅನುತ್ಪಾದಕ ಆಸ್ತಿ | Nil | Nil | – |

2020–21ನೇ ಸಾಲಿನಲ್ಲಿ ಸಂಘದ ಈ ಅನನ್ಯ ಅತ್ಯುಜ್ವಲ ಸಾಧನೆಗೆ ಕಾರಣಕರ್ತರಾದ ಆಡಳಿತ ಮಂಡಳಿ ನಿರ್ದೇಶಕರು, ಶಾಖಾ ಸಲಹಾ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಮತ್ತು ಎಲ್ಲಾ ಸಿಬ್ಬಂದಿಗಳಿಗೆ ಹಾಗೂ ಸಂಘದ ಎಲ್ಲಾ ಸದಸ್ಯ ಬಾಂಧವರಿಗೆ ನನ್ನ ವಿಶೇಷ ಅಭಿನಂದನೆಗಳನ್ನು ಅಧ್ಯಕ್ಷರಾದ ಕೆ. ಜೈರಾಜ್ ಬಿ. ರೈಯವರು ಸಲ್ಲಿಸಿದ್ದಾರೆ.

# ಅಮೆರಿಕನ್ ಎಕ್ಸ್‌ಪ್ರೆಸ್, ಡಿನ್ನರ್ಸ್ ಕ್ಲಬ್ ಕ್ರೆಡಿಟ್ ಕಾರ್ಡ್‌ಗೆ ಆರ್‌ಬಿಐ ನಿಷೇಧ




**ಹೊಸದಿಲ್ಲಿ :** ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಕ್ರೆಡಿಟ್ ಕಾರ್ಡ್ ವಿತರಕ ಕಂಪನಿಗಳಾದ ಅಮೆರಿಕನ್ ಎಕ್ಸ್‌ಪ್ರೆಸ್ ಬ್ಯಾಂಕಿಂಗ್ ಕಾರ್ಪ್ ಮತ್ತು ಡಿನ್ನರ್ಸ್ ಕ್ಲಬ್ ಇಂಟರ್‌ನ್ಯಾಷನಲ್ ಲಿ. ಗೆ ನಿರ್ಬಂಧ ಹೇರಿದೆ. ದೇಶೀಯ ಗ್ರಾಹಕರಿಗೆ 2021ರ ಮೇ 1 ರಿಂದ ಹೊಸ ಕ್ರೆಡಿಟ್ ಕಾರ್ಡ್‌ಗಳನ್ನು ವಿತರಿಸದಂತೆ ನಿಷೇಧ ಹೇರಿದೆ. ಹಾಲಿ ಗ್ರಾಹಕರಿಗೆ ಈ ಅದೇಶದಿಂದ ಯಾವುದೇ ತೊಂದರೆ ಆಗುವುದಿಲ್ಲ. ಈ ಕಂಪನಿಗಳು ಆರ್‌ಬಿಐ ನಿಯಮಗಳ ಅನ್ವಯ ಪೇಮೆಂಟ್ ಸಿಸ್ಟಮ್ ಡೇಟಾಗಳನ್ನು ಭಾರತದಲ್ಲಿ ಸ್ಟೋರೇಜ್ ಮಾಡಿರಲಿಲ್ಲ. ಹೀಗಾಗಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಕಠಿಣ ನಿರ್ಧಾರಕ್ಕೆ ಬಂದಿದೆ. 6 ತಿಂಗಳಿನೊಳಗೆ ಪೇಮೆಂಟ್ ಸಿಸ್ಟಮ್‌ಗೆ ಸಂಬಂಧಿಸಿದ ಎಲ್ಲ ಡೇಟಾಗಳನ್ನು ಭಾರತದಲ್ಲಿಯೇ ಸ್ಟೋರೇಜ್ ಮಾಡುವಂತೆ ಆರ್‌ಬಿಐ ಈ ಎರಡೂ ಸಂಸ್ಥೆಗಳಿಗೆ 2018ರ ಏಪ್ರಿಲ್ 6 ರಂದೇ ಸೂಚಿಸಿತ್ತು. ಆದರೆ ಇದನ್ನು ಈ ಸಂಸ್ಥೆಗಳು ಪಾಲಿಸಿರಲಿಲ್ಲ. ಹೀಗಾಗಿ ಈ ಎರಡೂ ಸಂಸ್ಥೆಗಳಿಗೆ ಹೊಸ ಕ್ರೆಡಿಟ್ ಕಾರ್ಡ್‌ಗಳನ್ನು ವಿತರಿಸದಂತೆ ಆರ್‌ಬಿಐ ಸೂಚನೆ ನೀಡಿದೆ.

ಅಮೆರಿಕನ್ ಎಕ್ಸ್‌ಪ್ರೆಸ್ ಮತ್ತು ಡಿನ್ನರ್ಸ್ ಕ್ಲಬ್ ಆರಂಭದಲ್ಲೇ ಭಾರತ ಪ್ರವೇಶಿಸಿದ ಕ್ರೆಡಿಟ್ ಕಾರ್ಡ್ ಕಂಪನಿಗಳಾಗಿವೆ. ನಂಬಿಕಸ್ಥ ಸಂಸ್ಥೆಗಳಾಗಿ ಇವು ಹೆಸರು ಮಾಡಿದ್ದು, ಶ್ರೀಮಂತ ವರ್ಗದಲ್ಲಿ ಇವುಗಳ ಕ್ರೆಡಿಟ್ ಕಾರ್ಡ್ ಬಳಕೆ ಹೆಚ್ಚಿದೆ. ವೀಸಾ, ಮಾಸ್ಟರ್ ಕಾರ್ಡ್ ದೇಶಕ್ಕೆ ಬರುವ ಮೊದಲು ಮಾರುಕಟ್ಟೆಯಲ್ಲಿ ಇವುಗಳದ್ದೇ ಪಾಲು ಹೆಚ್ಚಿತ್ತು. ಇಲ್ಲಿಯವರೆಗೆ ಅಮೆರಿಕನ್ ಎಕ್ಸ್‌ಪ್ರೆಸ್ ಭಾರತದಲ್ಲಿ 15 ಲಕ್ಷ ಕ್ರೆಡಿಟ್ ಕಾರ್ಡ್‌ಗಳನ್ನು ವಿತರಿಸಿದೆ.

# ಉತ್ತಮ ಆಡಳಿತ, ಪರಸ್ಪರ ವಿಶ್ವಾಸ ಹಾಗೂ ಗುಣಮಟ್ಟದ ಸೇವೆಯಿಂದ ಮಾತ್ರ ಅಭಿವೃದ್ಧಿ ಸಾಧ್ಯ : ಸಂದರ್ಶನದಲ್ಲಿ ಡಾ. ಆರ್. ಗುರುಸ್ವಾಮಿ ಅಭಿಪ್ರಾಯ

...11ನೇ ಪುಟದಿಂದ

ನೌಕರರಿಗೆ ಸಂಘದ ಉದ್ದೇಶ, ಗುರಿ ಹಾಗೂ ನಮ್ಮ ಸೇವೆಯ ಕುರಿತು ಮನವರಿಕೆ ಮಾಡಿ ಅವರಲ್ಲಿ ವಿಶ್ವಾಸವನ್ನು ಮೂಡುವಂತೆ ಪ್ರಾಮಾಣಿಕ ಪ್ರಯತ್ನ ಮಾಡಿದೆವು. ಇದರಿಂದ ನೌಕರರು ನಮ್ಮಲ್ಲಿ ಠೇವಣಿ ಇಡಲು ಮುಂದೆ ಬಂದರು. ಮುಂದೆ ಸಂಘದ ಕಾರ್ಯಚಟುವಟಿಕೆಗಳನ್ನು ಗಮನಿಸಿ ನಿವೃತ್ತಿ ಹೊಂದಿದ ನೌಕರರು ಸಹ ನಮ್ಮಲ್ಲಿ ಠೇವಣಿ ಇಡಲು ಮುಂದೆ ಬಂದರು. ಇಲ್ಲಿಂದ ನಮ್ಮ ಸಂಘ ಪ್ರತಿ ವರ್ಷ ಪ್ರಗತಿಯ ಪಥದಲ್ಲಿಯೇ ಸಾಗಿದೆ.

### 3. ಸಂಘದ ಅಭಿವೃದ್ಧಿಯ ಕುರಿತು...

ಸಹಕಾರ ಸಂಘ ಸಾಮಾಜಿಕ ಬದ್ಧತೆಯನ್ನು ಹೊಂದಿರುವ ಒಂದು ವ್ಯವಹಾರಿಕ ಸಂಸ್ಥೆ ಎಂಬುದನ್ನು ಈ ಕ್ಷೇತ್ರದ ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ಉತ್ತಮ ಆಡಳಿತ, ಪರಸ್ಪರ ವಿಶ್ವಾಸ, ಗುಣಮಟ್ಟದ ಸೇವೆ ಹಾಗೂ ಸೇವಾ ಮನೋಭಾವನೆಯಿಂದ ಸಹಕಾರ ಕ್ಷೇತ್ರದಲ್ಲಿ ದುಡಿದರೆ ಯಶಸ್ಸು ಖಂಡಿತಾ ಇದೆ. ಪ್ರಸ್ತುತ ನಾನು 2014 ರಿಂದ ಇಲ್ಲಿಯವರೆಗೆ ಎರಡನೇಯ ಬಾರಿಗೆ ಅಧ್ಯಕ್ಷನಾಗಿ ಸೇವೆಸಲ್ಲಿಸುತ್ತಿದ್ದೇನೆ. ಸಂಘ ಇಂದು ಸ್ವಂತಕಛೇರಿ ಹೊಂದಿದ್ದು, ಪ್ರಸ್ತುತ 596 ಸದಸ್ಯರಿದ್ದಾರೆ. ಪ್ರತಿ ವರ್ಷ ಠೇವಣಿ ಜೊತೆಗೆ ಸಂಘದ ವ್ಯವಹಾರಗಳಲ್ಲಿ ಗಣನೀಯ ಪ್ರಗತಿಯನ್ನು ಕಾಣುತ್ತಿದ್ದೇವೆ. ಸಂಘದಲ್ಲಿ ಕಳೆದ 25 ವರ್ಷಗಳಿಂದ ಚುನಾವಣೆ ನಡೆಯದೇ ಆಡಳಿತ ಮಂಡಳಿಗೆ ಅವಿರೋಧ ಆಯ್ಕೆ ನಡೆಯುತ್ತಿರುವುದು ವಿಶೇಷ.

ನಮ್ಮ ಸಂಘ 2020ಕ್ಕೆ 25ನೇ ವರ್ಷಕ್ಕೆ ಕಾಲಿಟ್ಟಿದೆ. ಸಂಭ್ರಮದಿಂದ ಬೆಳ್ಳಿ ಹಬ್ಬ ಆಚರಿಸಿಕೊಂಡಿದೆ. ಒಟ್ಟಾರೆ ಸದಸ್ಯರ ಸಂಪೂರ್ಣ ವಿಶ್ವಾಸವನ್ನು ಗಳಿಸಿದೆ.

### 4. ಸಂಘದ ಇತರ ಚಟುವಟಿಕೆಗಳು...

ನಮ್ಮ ಸದಸ್ಯರಿಗೆ ಇನ್ನೂ ಹೆಚ್ಚಿನ ಅನುಕೂಲವಾಗುವ ಉದ್ದೇಶದಿಂದ ಹೌಸಿಂಗ್ ಸಾಲವನ್ನು ಕೊಡುವ ಯೋಜನೆ ಹಾಕಿ ಕೊಂಡಿದ್ದೇವೆ. ವ್ಯವಹಾರಗಳ ಗಣಕೀಕರಣದ ಕಾರ್ಯ ಮುಗಿಯುವ ಹಂತದಲ್ಲಿದ್ದು, ಇದಾದ ನಂತರ ಇನ್ನೂ ಹೆಚ್ಚಿನ ಹೊಸ ಯೋಜನೆಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಜೊತೆಗೆ ಸಂಘದ ಸದಸ್ಯರಿಗೆ ಮರಣೋತ್ತರ ನಿಧಿಯನ್ನು, ಸದಸ್ಯರ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾಪುರಸ್ಕಾರ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

# ಸಹಕಾರ ಮಾರ್ಗದರ್ಶಿ : ಆಧುನಿಕ ಸಹಕಾರ ಚಳುವಳಿಯ ಉಗಮ

ಲೇಖನ : **ಬಸವೇಗೌಡ,** ನಿವೃತ್ತ ಅಪರ ನಿಬಂಧಕರು ಹಾಗೂ ಅಧ್ಯಕ್ಷರು,
ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು

**ಮೂರನೇ ಪಂಚವಾರ್ಷಿಕ ಯೋಜನೆಯ ನಂತರ ಮೂರು ವಾರ್ಷಿಕ ಯೋಜನೆಗಳನ್ನು ಅನುಷ್ಠಾನಗೊಳಿಸಲಾಯಿತು. ಕೇಂದ್ರ ಸರ್ಕಾರವು 1966-67ರಲ್ಲಿ ರೂ. 35.5 ಕೋಟಿ, 1967-68ರಲ್ಲಿ ರೂ.36.3 ಕೋಟಿ ಮತ್ತು 1968-69ರಲ್ಲಿ ರೂ.34 ಕೋಟಿಯನ್ನು ಸಹಕಾರದ ಬೆಳವಣಿಗೆಗಾಗಿ ನೀಡಿತು.**



... ಹಿಂದಿನ ಸಂಚಿಕೆಯಿಂದ

**ಮೂರನೇ ಪಂಚವಾರ್ಷಿಕ ಯೋಜನೆಯ ಅವಧಿಯ ಪ್ರಗತಿ :**

1. **ಒಟ್ಟು ಸಂಘಗಳ ಸ್ಥಾಪನೆ :** ತಾ : 30-06-1966ಕ್ಕೆ ಇದ್ದಂತೆ ಎಲ್ಲಾ ಬಗೆಯ ಒಟ್ಟು ಸಹಕಾರ ಸಂಘಗಳು 3.46 ಲಕ್ಷ, ಸದಸ್ಯರ ಸಂಖ್ಯೆ 5 ಕೋಟಿ ಹಾಗೂ ದುಡಿಯುವ ಬಂಡವಾಳ ರೂ.2800 ಕೋಟಿ ಪ್ರಗತಿಯಾಗಿರುತ್ತದೆ.
2. **ವ್ಯಾಪ್ತಿಗೆ ಒಳಪಟ್ಟ ಹಳ್ಳಿಗಳು :** ಮೂರನೇ ಪಂಚವಾರ್ಷಿಕ ಯೋಜನೆಯ ಕೊನೆಯ ವೇಳೆಗೆ ಒಟ್ಟು 5,63,629 ಗ್ರಾಮಗಳ ಪೈಕಿ 5,02,816 ಗ್ರಾಮಗಳು ಪ್ರಾಥಮಿಕ ಕೃಷಿ ಪತ್ತಿನ ಸಂಘಗಳ ವ್ಯಾಪ್ತಿಗೆ ಒಳಪಟ್ಟಿದ್ದವು. ಸ್ಥಗಿತವಾಗಿದ್ದ 23,680 ಸಂಘಗಳಿಗೆ ಸೇರಿದ 45.352 ಗ್ರಾಮಗಳನ್ನು ಹೊರತುಪಡಿಸಿದರೆ ಶೇ.82ರಷ್ಟು ಗ್ರಾಮಗಳು ಕಾರ್ಯನಿರತ ಸಂಘಗಳ ವ್ಯಾಪ್ತಿಗೆ ಒಳಪಟ್ಟಿದ್ದವು.
3. **ಪುನಶ್ಚೇತನ ಕಾರ್ಯ :** ಪ್ರಾಥಮಿಕ ಕೃಷಿ ಪತ್ತಿನ ಸಂಘಗಳ ಪುನಶ್ಚೇತನ ಮತ್ತು ಸಂಯೋಜನೆ ಕ್ರಮಗಳ ಪರಿಣಾಮವಾಗಿ ಸಂಘಗಳ ಸಂಖ್ಯೆ 2.30 ಲಕ್ಷ ದಿಂದ 1.92 ಲಕ್ಷಕ್ಕೆ ಇಳಿದಿದ್ದು, ಇವುಗಳ ಪೈಕಿ 23,680 ಸ್ಥಗಿತಗೊಂಡಿದ್ದವು. ಶೇ.80ಕ್ಕಿಂತ ಹೆಚ್ಚಿನ ಸಂಘಗಳು 'ಸಿ', 'ಡಿ', 'ಇ' ಆಡಿಟ್ ವರ್ಗ ದಲ್ಲಿದ್ದವು.
4. **ಕೃಷಿ ಪತ್ತಿನ ಸಂಘಗಳಲ್ಲಿ ಸದಸ್ಯತ್ವ :** ಪ್ರಾಥಮಿಕ ಕೃಷಿ ಪತ್ತಿನ ಸಂಘಗಳಲ್ಲಿ ಒಟ್ಟು ಸದಸ್ಯರ ಸಂಖ್ಯೆ 2.61 ಕೋಟಿ ಇದ್ದು, ತಟಸ್ಥ ಸಂಘಗಳನ್ನು ಬಿಟ್ಟರೆ 2.46 ಕೋಟಿ ಮಾತ್ರ ಸದಸ್ಯರಿದ್ದು ಇದು ಶೇ.300 ರಷ್ಟು ಮಾತ್ರ ಪ್ರಗತಿಯಾಗಿರುತ್ತದೆ. ಸಾಲ ಪಡೆದವರ ಸಂಖ್ಯೆ ಸುಮಾರು ಶೇ.42, ಒಟ್ಟು ದುಡಿಯುವ ಬಂಡವಾಳ ರೂ.427 ಕೋಟಿ. ದೀರ್ಘಾವಧಿ ಸಾಲ ನೀಡುವ ಒಟ್ಟು 673 ಪ್ರಾಥಮಿಕ ಭೂ ಅಡಮಾನ್ ಬ್ಯಾಂಕ್‌ಗಳಿದ್ದೂ, ಸದಸ್ಯರ ಸಂಖ್ಯೆ 18 ಲಕ್ಷ ಹಾಗೂ ದೀರ್ಘಾವಧಿ ಸಾಲದ ಬಾಕಿ ರೂ. 163 ಕೋಟಿ.
5. **ಕೃಷಿಯೇತರ ಪತ್ತಿನ ಸಂಘಗಳು :** ಪಟ್ಟಣ ಸಹಕಾರ ಬ್ಯಾಂಕ್‌ಗಳು ನೌಕರರ ಪತ್ತಿನ ಸಹಕಾರ ಸಂಘಗಳು 13,449 ಇದ್ದು, ಇವುಗಳ ಸದಸ್ಯರ ಸಂಖ್ಯೆ 65 ಲಕ್ಷ, ಠೇವಣಿ ರೂ.177 ಕೋಟಿ, ದುಡಿಯುವ ಬಂಡವಾಳ ರೂ. 275 ಕೋಟಿ ಪ್ರಗತಿ ಆಗಿತ್ತು. ಇವು ಕೃಷಿ ಪತ್ತಿನ ಸಂಘಗಳಿಗಿಂತ ಸುಸ್ಥಿತಿಯಲ್ಲಿದ್ದವು.
6. **ಮಾರಾಟ ಸಂಘಗಳು :** 3198 ಪ್ರಾಥಮಿಕ ಮಾರಾಟ ಸಂಘಗಳು 155 ಕೇಂದ್ರ ಸಂಘಗಳು, 21 ರಾಜ್ಯ ಮಟ್ಟ ಸಂಸ್ಥೆಗಳು ಹಾಗೂ ಒಂದು ರಾಷ್ಟ್ರೀಯ ಮಹಾಮಂಡಳ (ಓಂಈಇಈ) ಸ್ಥಾಪನೆಯಾಗಿದ್ದವು. ಪ್ರಾಥಮಿಕ ಮಾರಾಟ ಸಂಘಗಳ ಷೇರು ಬಂಡವಾಳ ರೂ.18.7 ಕೋಟಿ ಹಾಗೂ ಮೀಸಲು ನಿಧಿ ರೂ.9 ಕೋಟಿ ತಲುಪಿತ್ತು. 1965-66ರಲ್ಲಿ ಮಾರಾಟದ ಮೊಬಲಗು ರೂ 309 ಕೋಟಿ ತಲುಪಿತು.
7. **ಸಂಸ್ಕರಣಾ ಸಂಘಗಳು :** ಸ್ಥಾಪನೆಯಾದ ಒಟ್ಟು 78 ಸಹಕಾರ ಸಕ್ಕರೆ ಕಾರ್ಖಾನೆಗಳ ಪೈಕಿ 51 ಉತ್ಪಾದನೆ ಆರಂಭಿಸಿದ್ದವು. ರಾಷ್ಟ್ರದ ಒಟ್ಟು ಸಕ್ಕರೆ ಉತ್ಪಾದನೆಯಲ್ಲಿ ಸಹಕಾರದ ಪಾಲು ಶೇ.34, ಇತರೇ ಸಂಸ್ಕರಣಾ ಸಂಘಗಳಾದ 155 ಹತ್ತಿ ಗಿರಣಿಗಳು, 142 ಅಕ್ಕಿ ಗಿರಣಿಗಳು, 298 ಎಣ್ಣೆ ಗಿರಣಿಗಳು, 22 ಹಣ್ಣು ಮತ್ತು ತರಕಾರಿ ಘಟಕಗಳು, ಇತ್ಯಾದಿ ಸಹಕಾರ ಕ್ಷೇತ್ರದಲ್ಲಿ ಆರಂಭವಾಗಿ ಪ್ರಗತಿ ಕಂಡಿತು.
8. **ಕೈಗಾರಿಕಾ ಸಹಕಾರ ಸಂಘಗಳು :** 1966ರ ಜೂನ್ ಅಂತ್ಯಕ್ಕೆ ಒಟ್ಟು 12,947 ಪ್ರಾಥಮಿಕ ನೇಕಾರರ ಸಂಘಗಳು, 109 ಜಿಲ್ಲಾಮಟ್ಟದ ಸಂಘಗಳು ಹಾಗೂ 20 ರಾಜ್ಯ ಮಟ್ಟದ ಮಹಾಮಂಡಳಗಳಿದ್ದವು.

ಇವುಗಳ ಒಟ್ಟು ಸದಸ್ಯತ್ವ 13 ಲಕ್ಷ, ದುಡಿಯುವ ಬಂಡವಾಳ ರೂ.34 ಕೋಟಿ ಹಾಗೂ ಒಟ್ಟು ಉತ್ಪಾದನೆ 1965–66ರಲ್ಲಿ 53 ಕೋಟಿ ಪ್ರಗತಿ ಆಗಿತ್ತು. 34,950 ಇತರೆ ಕೈಗಾರಿಕಾ ಸಹಕಾರ ಸಂಘಗಳಿದ್ದು, ಇವುಗಳಿಗೆ ಸಂಬಂಧಿಸಿದ 121 ಕೇಂದ್ರ ಹಾಗೂ 21 ರಾಜ್ಯ ಮಟ್ಟದ ಮಹಾಮಂಡಳಗಳಿದ್ದವು.

9. **ಗ್ರಾಹಕರ ಸಹಕಾರ ಸಂಘಗಳು :** ಗ್ರಾಹಕರ ಸಹಕಾರ ಸಂಘಗಳ ಸ್ಥಾಪನೆ ಮತ್ತು ಅವುಗಳ ಮೂಲಕ ಅಗತ್ಯ ವಸ್ತುಗಳ ವಿತರಣೆಗೆ ಸಕಾರವು ಉತ್ತೇಜಿಸಿತು. ಒಟ್ಟು ಸಂಘಗಳ ಸಂಖ್ಯೆ 13,077, ಸದಸ್ಯತ್ವ 29.30 ಲಕ್ಷ ಇದ್ದು ಶೇ.33 ರಷ್ಟು ಸಂಘಗಳು ಸ್ಥಗಿತಗೊಂಡಿದ್ದವು.

10. **ಇತರೆ ಸಂಘಗಳು :** ಮೂರನೇ ಪಂಚವಾರ್ಷಿಕ ಯೋಜನೆಯ ಕೊನೆಯ ವೇಳೆಗೆ ಸಹಕಾರ ಕ್ಷೇತ್ರದ ವ್ಯಾಪ್ತಿ ಹಾಗೂ ಆರ್ಥಿಕ ಚಟುವಟಿಕೆಗಳು ವಿಸ್ತಾರಗೊಂಡವು. 5077 ಬೇಸಾಯ ಸಂಘಗಳು, 1558 ನೀರಾವರಿ ಸಂಘಗಳು, 3558 ಮೀನುಗಾರಿಕೆ ಸಂಘಗಳು, ಇತ್ಯಾದಿ ಸ್ಥಾಪನೆಯಾದವು.

ಮೂರನೇ ಪಂಚವಾರ್ಷಿಕ ಯೋಜನೆಯ ಅಂತ್ಯಕ್ಕೆ ಸಹಕಾರ ಚಳವಳಿಯು ಕೃಷಿ ಪತ್ತಿನ ಜೊತೆಗೆ ಮಾರಾಟ, ಗ್ರಾಹಕ, ಕೈಗಾರಿಕೆ, ಸಂಸ್ಕರಣಾ, ಹೈನುಗಾರಿಕೆ ಇತ್ಯಾದಿ, ಕ್ಷೇತ್ರಗಳಿಗೂ ವ್ಯಾಪಿಸಿತು. ನೀತಿ ರೂಪಕರ ವಿಶ್ವಾಸ ಗಳಿಸಿ ಸಾಧನೆಯ ಹಾದಿಯಲ್ಲಿ ಚಳುವಳಿಯು ಸಾಗಿತು.



**ವಾರ್ಷಿಕ ಯೋಜನೆಗಳು (1966–69) :** ಮೂರನೇ ಪಂಚವಾರ್ಷಿಕ ಯೋಜನೆಯ ನಂತರ ಮೂರು ವಾರ್ಷಿಕ ಯೋಜನೆಗಳನ್ನು ಅನುಷ್ಠಾನಗೊಳಿಸಲಾಯಿತು. ಕೇಂದ್ರ ಸರ್ಕಾರವು 1966–67ರಲ್ಲಿ ರೂ. 35.5 ಕೋಟಿ, 1967–68ರಲ್ಲಿ ರೂ.36.3 ಕೋಟಿ ಮತ್ತು 1968–69ರಲ್ಲಿ ರೂ.34 ಕೋಟಿಯನ್ನು ಸಹಕಾರದ ಬೆಳವಣಿಗೆಗಾಗಿ ನೀಡಿತು.

**ನಾಲ್ಕನೇ ಪಂಚವಾರ್ಷಿಕ ಯೋಜನೆ (1969–74) :** ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರವನ್ನು ರಾಷ್ಟ್ರೀಯ ನೀತಿಯ ಭಾಗವಾಗಿ ಉತ್ತೇಜಿಸಲಾಯಿತು. ಸಾಮಾಜಿಕ ಉದ್ದೇಶವುಳ್ಳ ಸಹಕಾರವು ತನ್ನ ಮುಂದಿರುವ ದೊಡ್ಡ ಪ್ರಮಾಣದ ಅಂಶಗಳನ್ನು ಬಳಸಿಕೊಂಡು ಬೆಳೆಯಲು ಸರ್ಕಾರವು ನೆರವು ನೀಡುವುದು ಹಾಗೂ ಹಣಕಾಸು, ಸಂಘಟನೆ, ತರಬೇತಿ, ಇತ್ಯಾದಿ ವಿಷಯಗಳಲ್ಲಿ ಸಹಕಾರ ಸಂಸ್ಥೆಗಳನ್ನು ಸನ್ನದ್ದುಗೊಳಿಸುವುದಕ್ಕೆ ಬೆಂಬಲ ನೀಡುವುದು ಉದ್ದೇಶವಾಗಿರುತ್ತದೆ. ನಾಲ್ಕನೇ ಪಂಚವಾರ್ಷಿಕ ಯೋಜನೆಯ ಗುರಿ "ಬೆಳವಣಿಗೆ ಮತ್ತು ಸ್ಥಿರತೆ" (Growth & Stability) ಇರುತ್ತದೆ ಹಾಗೂ ಇದನ್ನೇ ಸಹಕಾರ ಚಳುವಳಿಯು ಸಹ ಸಾಧಿಸಬೇಕೆಂಬುದು ಉದ್ದೇಶ. ಬೆಳೆ ಸಾಲ ನೀತಿಯನ್ನು



ಅನುಷ್ಠಾನಗೊಳಿಸಿ ರೈತರಿಗೆ ಅಗತ್ಯವಿರುವ ಎಲ್ಲಾ ಸೇವೆಗಳನ್ನು ಒದಗಿಸಲು ಸಾಂಸ್ಥಿಕರಣಗೊಳಿಸುವ (Institutionalize) ಯೋಜನೆ ಹಾಗೂ ಕೃಷಿ, ಗ್ರಾಹಕ, ಮಾರಾಟ, ಸಂಸ್ಕರಣಾ ಹಾಗೂ ಕೈಗಾರಿಕಾ ವಲಯಗಳಿಗೆ ಹೆಚ್ಚಿನ ಒತ್ತು ನೀಡುವುದು.

**ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ರೂಪಿಸಿದ ಕಾರ್ಯಕ್ರಮಗಳು :**

(1) ಪ್ರಾಥಮಿಕ ಕೃಷಿ ಪತ್ತಿನ ಸಂಘಗಳ ಪುನಶ್ಚೇತನ ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಸುಸ್ತಿ ಸಾಲವನ್ನು ಕಡಿಮೆಗೊಳಿಸಿ, ಠೇವಣಿ ಸಂನ್ಮೂಲಗಳನ್ನು ವೃದ್ಧಿಸಿ ಸದೃಡವಾಗಿಸುವುದು; ಎಲ್ಲಾ ಗ್ರಾಮಗಳನ್ನು ಹಾಗೂ ಶೇ.70 ರಷ್ಟು ಗ್ರಾಮೀಣ ಜನರನ್ನು ಕೃಷಿ ಪತ್ತಿನ ಸಂಘಗಳ ವ್ಯಾಪ್ತಿಯಲ್ಲಿ ತರುವುದು; ಈ ಯೋಜನೆಯ ಕೊನೆಯ ವರ್ಷದ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲ ನೀಡಿಕೆಯ ಗುರಿ ರೂ.750 ಕೋಟಿ ಹಾಗೂ ಯೋಜನೆಯ 5 ವರ್ಷಗಳ ಅವಧಿಯಲ್ಲಿ ದೀರ್ಘಾವಧಿ ಸಾಲ ನೀಡಿಕೆಯ ಗುರಿ ರೂ. 700ಕೋಟಿ.

(2) ಸಣ್ಣ ರೈತರಿಗೆ ಅವರ ಆರ್ಥಿಕ ಸುಧಾರಣೆಗಾಗಿ ಸಹಕಾರಿ ಸಾಲ ಒದಗಿಸುವುದು.

(3) ಮಾರಾಟ ಮತ್ತು ಸಂಸ್ಕರಣಾ ಸಂಘಗಳನ್ನು ಸದೃಢಗೊಳಿಸುವುದು ಹಾಗೂ ಅಂತರ್ ರಾಜ್ಯ ಮಾರಾಟ ಮತ್ತು ರಫ್ತು ವ್ಯಾಪಾರವನ್ನು ಕೈಗೊಳ್ಳುವುದಕ್ಕಾಗಿ ಉತ್ತೇಜಿಸುವುದು.

(4) ಗ್ರಾಹಕ ಸಹಕಾರ ಸಂಘಗಳನ್ನು ಬಲಗೊಳಿಸುವುದು, ಕೇಂದ್ರ ಗ್ರಾಹಕ ಸಹಕಾರ ಸಂಘಗಳನ್ನು ಮತ್ತು ರಾಜ್ಯ ಮಟ್ಟದ ಗ್ರಾಹ ಮಹಾಮಂಡಳಗಳನ್ನು ಸ್ಥಾಪಿಸಿ ಬೆಳವಣಿಗೆ ಸಾಧಿಸಲು ಪ್ರೋತ್ಸಾಹಿಸುವುದು. (5) ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಪತ್ತಿನ ಹಾಗೂ ಮಾರಾಟ ಸಂಘಗಳ ಮೂಲಕ ಗ್ರಾಹಕ ವಸ್ತುಗಳ ವಿತರಣೆ – ಇವೇ ಮುಂತಾದವುಗಳ ಗುರಿಯನ್ನು ಹೊಂದಲಾಗಿರುತ್ತದೆ.

ಮುಂದುವರೆಯುವುದು...

# ಮೇ 1 - ವಿಶ್ವ ಕಾರ್ಮಿಕರ ದಿನಾಚರಣೆ

# ಕೊರೊನಾ ಕಪಿಮುಷ್ಠಿಯಲ್ಲಿ ನಲುಗಿದ ಬಡಕಾರ್ಮಿಕರ ಬದುಕು

ದೇಶದಲ್ಲಿ 2020ರ ಮಾರ್ಚ್ ಮಾಹೆಯಲ್ಲಿ ತೀವ್ರಗೊಂಡ ಕೊರೋನಾ ಮಹಾಮಾರಿಯ ಉಲ್ಬಣ ಮನುಕುಲಕ್ಕೆ ಶಾಪವಾಗಿ ಪರಿಣಮಿಸಿದೆ. ಇದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಸಂಘ ಸಂಸ್ಥೆಗಳು ಸೋಂಕು ನಿಯಂತ್ರಣಕ್ಕೆ ಹಲವಾರು ಉಪಯುಕ್ತ ಕ್ರಮಗಳನ್ನು ಕೈಗೊಂಡವು. ಈ ಕ್ರಮಗಳು ಸಾರ್ವಜನಿಕರ ಮೆಚ್ಚುಗೆಗೆ ಕಾರಣವಾದವು.

ಲಾಕ್‌ಡೌನ್ ಸಂದರ್ಭದಲ್ಲಿ ವಲಸೆ ಕಾರ್ಮಿಕರು, ಸಣ್ಣ ಕೃಷಿಕರು, ಬಡವರ್ಗದ ಜನರು ಆರ್ಥಿಕವಾಗಿ ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದುಂಟು. ವಿವಿಧ ಸಹಕಾರ ಶೃಂಗ ಮಹಾಮಂಡಳಗಳು, ಪಟ್ಟಣ ಬ್ಯಾಂಕು/ಸಂಘಗಳು ಉದಾರ ದೇಣಿಗೆಯ ಜೊತೆಗೆ ಅಬಲ ಜನರಿಗೆ ಆಹಾರದ ಕಿಟ್ಟುಗಳನ್ನು ವಿತರಿಸಿದರು. ಕರ್ನಾಟಕ ಹಾಲು ಮಹಾಮಂಡಳಿಯು ರಾಜ್ಯದ ನಗರದ, ಪಟ್ಟಣ ಪ್ರದೇಶಗಳಲ್ಲಿ ಇಂಥ ಜನರಿಗೆ ಉಚಿತ ಹಾಲು ಪೂರೈಕೆ ಮಾಡಿದ್ದು, ಕೊರೋನಾ ಸೋಂಕು ನಿಯಂತ್ರಣದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದ 42500 ಆಶಾ ಕಾರ್ಯಕರ್ತೆಯರಿಗೆ ಸಹಕಾರ ಬ್ಯಾಂಕು/ಸಂಘಗಳಿಂದ ತಲಾ 3 ಸಾವಿರ ರೂ.ಗಳ ಪ್ರೋತ್ಸಾಹಧನ ನೀಡಿದ್ದು ಮಾನವೀಯತೆಯನ್ನು ತೋರಿವೆ.

2021ರ ವರ್ಷದ ಏಪ್ರಿಲ್ ಮಾಹೆಯಿಂದ ಕೊರೋನಾ ಸೋಂಕು 2ನೇ ಅಲೆ ಎದ್ದಿದೆ. ಪ್ರತಿನಿತ್ಯ ಸೋಂಕಿತರ ಸಂಖ್ಯೆ ಹೆಚ್ಚುತ್ತಲೇ ಇದೆ. ಬಡಜನರ, ಅಸಂಘಟಿತ ವಲಯದ ಕಾರ್ಮಿಕರು, ವಲಸೆ ಕಾರ್ಮಿಕರ ಬಗ್ಗೆಯೂ ಈ ಸಂದರ್ಭದಲ್ಲಿ ಸರ್ಕಾರಗಳು, ಸಂಘ ಸಂಸ್ಥೆಗಳು ಹೆಚ್ಚು ಗಮನ ಹರಿಸಬೇಕಿದೆ.

ಕಾರ್ಮಿಕರ ದಿನಾಚರಣೆಯ ಸಂದರ್ಭದಲ್ಲಿ ಅವರಲ್ಲಿ ಆತ್ಮಸ್ಥೈರ್ಯ ತುಂಬಿ ವಲಸೆ ಹೋಗದಂತೆ ತಡೆದು ಅಂಥ ಜನರಿಗೆ ಮೂಲಭೂತ ಸೌಕರ್ಯಗಳು ಸೇರಿದಂತೆ ಆರ್ಥಿಕ ನೆರವು ನೀಡಿದರೆ ಅಭಿವೃದ್ಧಿ ಕಾರ್ಯಗಳು ವೇಗ ಪಡೆಯಲು ಸಾಧ್ಯವಾಗುತ್ತದೆ.

ಒಂದು ದೇಶ ಆರ್ಥಿಕ, ಸಾಮಾಜಿಕ ಹಾಗೂ ಕೈಗಾರಿಕಾ ಕ್ಷೇತ್ರದಲ್ಲಿ ಸಮಗ್ರ ಪ್ರಗತಿ ಸಾಧಿಸಬೇಕಾದರೆ ಆ ದೇಶದಲ್ಲಿ ದುಡಿಯುವ ವರ್ಗ ಅಂದರೆ ಕಾರ್ಮಿಕ ವರ್ಗದ ಪಾತ್ರ ಮಹತ್ವವಾದದ್ದು. ಆ ಹಿನ್ನಲೆಯಲ್ಲಿ ಇಂದು ಜಗತ್ತಿನ ಎಲ್ಲಾ ದೇಶಗಳು ಮಾನವ ಸಂಪನ್ಮೂಲ ಅಭಿವೃದ್ಧಿಗೆ ವಿಶೇಷ ಮಹತ್ವ ನೀಡಿದ್ದು. ವಿಶೇಷ ಕೌಶಲ್ಯ ಆಧಾರಿತ ದುಡಿಯುವ ವರ್ಗಗಳನ್ನು ಸೃಷ್ಟಿಸಲು ನೂರಾರು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುತ್ತಿವೆ.

ಭಾರತದಂತಹ ಅತಿದೊಡ್ಡ ಪ್ರಮಾಣದ ಜನಸಂಖ್ಯೆಯನ್ನು ಹೊಂದಿರುವ ದೇಶಗಳಿಗೆ ಮಾನವ ಸಂಪನ್ಮೂಲಗಳು ವರದಾನವಾಗಿ ಪರಿಣಮಿಸಿದೆ. ಜಗತ್ತಿನಲ್ಲಿ ಅತ್ಯಧಿಕ ಸಂಖ್ಯೆಯ ಯುವ ಸಮುದಾಯವನ್ನು ಹೊಂದಿರುವ ಭಾರತಕ್ಕೆ ಮಾನವ ಸಂಪನ್ಮೂಲ ದೊಡ್ಡ ಮಟ್ಟದ ಆದಾಯ ತಂದು ಕೊಡುವ ಮೂಲವಾಗಿದೆ.

ಭಾರತದ ಮಾನವ ಸಂಪನ್ಮೂಲಗಳಲ್ಲಿ ಸಂಘಟಿತ ಕ್ಷೇತ್ರಗಳಲ್ಲಿ ದುಡಿಯುವವರಿಗಿಂತ ಅಸಂಘಟಿತ ಕ್ಷೇತ್ರದಲ್ಲಿ ದುಡಿಯುವ ಕಾರ್ಮಿಕ ಸಮುದಾಯ ದೊಡ್ಡ ಪ್ರಮಾಣದಲ್ಲಿದೆ.

ಕೃಷಿ, ಕಟ್ಟಡ ನಿರ್ಮಾಣ, ಹೋಟೆಲ್, ಸಾರಿಗೆ, ಗಣಿ, ಸಿದ್ಧ ಉಡುಪು ತಯಾರಿಕೆ, ಮೀನುಗಾರಿಕೆ, ಆರೋಗ್ಯ, ಶಿಕ್ಷಣ ಹಾಗೂ ಉತ್ಪಾದನಾ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದ ದುಡಿಯುವ ವರ್ಗ ತೊಡಗಿಸಿಕೊಂಡಿದೆ. ಅದೇ ರೀತಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿಯೂ ಲಕ್ಷಾಂತರ ಮಂದಿ ಸೇವೆ ಸಲ್ಲಿಸುತ್ತಿದ್ದಾರೆ.

ಈ ಎಲ್ಲಾ ಕ್ಷೇತ್ರಗಳಿಗಿಂತ ಕೃಷಿ, ಕಟ್ಟಡ ನಿರ್ಮಾಣ, ಮೀನುಗಾರಿಕೆ ಕ್ಷೇತ್ರದಲ್ಲಿ ದೇಶ ಒಟ್ಟು ಕಾರ್ಮಿಕರ ಸಂಖ್ಯೆಯಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗ ಉದ್ಯೋಗ ನಿರತರಾಗಿದ್ದು ಇವರಿಗೆ ನಿಯಮಿತ ಆದಾಯವಿಲ್ಲದೆ ಸದಾಕಾಲ ಅಭದ್ರತೆಯಲ್ಲಿಯೇ ಜೀವನ ಸಾಗಿಸುವಂತಾಗಿದೆ.

**ಬದುಕು ಕಿತ್ತುಕೊಂಡ ಮಾರಕ ಕೊರೊನಾ :** 2020ರಲ್ಲಿ ಜಗತ್ತಿಗೆ ಬಂದು ಅಪ್ಪಳಿಸಿದ ಮಾರಕ ಕೊರೊನಾ ಮಹಾಮಾರಿ ಸೋಂಕು ಬಡಕಾರ್ಮಿಕರ ಜೀವನವನ್ನೇ ಕಿತ್ತುಕೊಂಡು ಅವರು ಬೀದಿ ಪಾಲಾಗುವಂತೆ ಮಾಡಿದೆ. ಕೊರೊನಾ ಆರ್ಭಟಕ್ಕೆ ಭಾರತ ಸಹಿತ ಜಗತ್ತಿನಾದ್ಯಂತ ಸಂಘಟಿತ ಮತ್ತು ಅಸಂಘಟಿತ ಕ್ಷೇತ್ರದಲ್ಲಿ ಕೋಟ್ಯಂತರ ಮಂದಿ ಕಾರ್ಮಿಕರು ಕೆಲಸ ಕಳೆದುಕೊಂಡು ಬೀದಿ ಪಾಲಾದರು.

ಭಾರತದಲ್ಲಿ ಹತ್ತು ಕೋಟಿಗೂ ಅಧಿಕ ಮಂದಿ ಕೆಲಸ ಕಳೆದುಕೊಂಡು ಹತಾಶ ಸ್ಥಿತಿ ಅನುಭವಿಸುವಂತಾಗಿದೆ. ಇದಲ್ಲದೆ ಲಕ್ಷಾಂತರ ಮಂದಿ ಕೊರೊನಾ ಸೋಂಕಿಗೆ ತುತ್ತಾಗಿ ಪ್ರಾಣ ಕಳೆದು ಕೊಂಡರು. ಅಧಿಕೃತ ಅಂಕಿ ಅಂಶಗಳ ಪ್ರಕಾರ ಭಾರತದಲ್ಲಿ ಕೊರೊನಾ ಸೋಂಕಿನ ಕರಿನೆರಳಿನಿಂದ ಕೆಲಸವಿಲ್ಲದೆ ಅಸಂಘಟಿತ ಕಾರ್ಮಿಕ ವಲಯಕ್ಕೆ 63,553 ಕೋಟಿ ರೂಪಾಯಿ ನಷ್ಟವಾಗಿದ್ದು ಇದು ಕೇಂದ್ರ ಸರ್ಕಾರ ಮಹಾತ್ಮಾಗಾಂಧಿ ಉದ್ಯೋಗ ಖಾತ್ರಿ ಯೋಜನೆಗೆ 2020–21 ಸಾಲಿನ ಬಜೆಟ್‌ನಲ್ಲಿ ನಿಗದಿ ಪಡಿಸಿದ ಮೊತ್ತಕ್ಕೆ ಸಮನಾಗಿದೆ.

ಕೊರೊನಾ ಹಾವಳಿ ಮುಂದುವರೆದಿದ್ದು ಜನಸಾಮಾನ್ಯರು, ಕಾರ್ಮಿಕರು ಅಭದ್ರತೆಯಲ್ಲಿಯೇ ಜೀವನ ಸಾಗಿಸುವಂತಾಗಿದೆ. ಪರಿಸ್ಥಿತಿ ಇದೇರೀತಿ ಮುಂದುವರಿದರೆ ಕೆಲಸ ಕಳೆದುಕೊಳ್ಳುವವರ



ಸಂಖ್ಯೆ ಇನ್ನೂ ಹೆಚ್ಚಾಗಲಿದೆ ಎಂದು ವಿವಿಧ ವಲಯಗಳ ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ. ಕೊರೊನಾ ಭೀತಿಯಿಂದ ಅಸಂಘಟಿತ ಕಾರ್ಮಿಕರು ನಗರದಿಂದ ತಮ್ಮ ತಮ್ಮ ಊರುಗಳಿಗೆ ವಾಪಸ್ ಆಗುವ ಪ್ರಕ್ರಿಯೆ ನಿರಂತರವಾಗಿ ಮುಂದುವರಿದಿದೆ ಇದರಿಂದ ಕಾರ್ಮಿಕರ ಬೇಡಿಕೆ ಮತ್ತು ಪೂರೈಕೆಯಲ್ಲಿ ಅಸಮತೋಲನ ಉಂಟಾಗಲಿದೆ ಹಾಗೂ ಅಭಿವೃದ್ಧಿ ಕಾರ್ಯಗಳೂ ನಿಧಾನಗತಿಯಲ್ಲಿ ಸಾಗುವುದರಿಂದ ದೇಶದ ಆರ್ಥಿಕ ಚಟುವಟಿಕೆಗಳಿಗೂ ಪೆಟ್ಟು ಎಂದು ಕಟ್ಟಡ ನಿರ್ಮಾಣ ಉದ್ಯಮದಲ್ಲಿ ತೊಡಗಿಸಿಕೊಂಡಿರುವ ದಯಾನಂದ ಹೇಳುತ್ತಾರೆ.

ಮಾರಕ ಕೊರೊನಾದಿಂದ ಕಳೆದ ಒಂದು ವರ್ಷದಿಂದ ಸರಿಯಾಗಿ ಕೆಲಸವಿಲ್ಲದೆ ಸಂಸಾರ ಸಾಗಿಸುವುದೆ ದುಸ್ತರವಾಗಿದ್ದು, ಮಕ್ಕಳ ವಿದ್ಯಾಭ್ಯಾಸಕ್ಕೆ ಹಣವಿಲ್ಲದೆ ಅತ್ಯಂತ ಸಂಕಷ್ಟದ ಪರಿಸ್ಥಿತಿ ಎದುರಿಸುವಂತಾಗಿದೆ ಎಂದು ಕಳೆದ ಹಲವಾರು ವರ್ಷಗಳಿಂದ ಬೆಂಗಳೂರಿನಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕನಾಗಿ ದುಡಿಯುತ್ತಿರುವ ಚಾಮರಾಜ ನಗರದ ಸಿದ್ದಪ್ಪ ಹೇಳುತ್ತಾರೆ.

ಆಟೋ ಚಾಲಕ ದಿನೇಶ್ ಮಾತನಾಡಿ ಕೊರೊನಾ ಮಹಾಮಾರಿಯಿಂದ ಕಳೆದ ಒಂದು ವರ್ಷದಿಂದ ಸರಿಯಾಗಿ ಆಟೋ ಓಡಿಸಲು ಸಾಧ್ಯವಾಗಿಲ್ಲ, ಆಟೋರಸ್ತೆಗೆ ಬಂದರು ಜನ ಆಟೋ ಹತ್ತುವುದು ಕಡಿಮೆಯಾಗಿದೆ ಇದರಿಂದ ಕುಟುಂಬ ನಿರ್ವಹಣೆ ಹಾಗೂ ಬ್ಯಾಂಕ್ ಸಾಲ ತೀರಿಸಲು ಸಾಧ್ಯವಾಗದೆ ತೀವ್ರ ತೊಂದರೆ ಅನುಭವಿಸುವಂತಾಗಿದೆ ಎಂದು ತಮ್ಮ ಗೋಳು ತೋಡಿಕೊಂಡರು.

**ಕೇಂದ್ರ ಕಾರ್ಮಿಕ ಸಂಘಗಳ ಸಲಹೆ :** ದೇಶದ ವಿವಿಧ ಭಾಗಗಳಲ್ಲಿ ಸಿಲುಕಿರುವ ವಲಸೆ ಕಾರ್ಮಿಕರನ್ನು ಸಾಗಿಸಲು ಹೆಚ್ಚಿನ ರೈಲುಗಳನ್ನು ಒದಗಿಸುವುದು. ಈ ಕಾರ್ಮಿಕರಿಗೆ ಅವರ ಕುಟುಂಬಗಳನ್ನು ನಡೆಸಲು ಅಗತ್ಯ ಹಣಕಾಸಿನ ನೆರವು ಸಹ ನೀಡಬಹುದು ಮತ್ತು ಪರಿಸ್ಥಿತಿ ನಿಯಂತ್ರಣಕ್ಕೆ ಬಂದ ನಂತರ ಕೆಲಸಕ್ಕೆ ಮರಳಲು ಅವರಿಗೆ ಅನುಕೂಲ ಮಾಡಿಕೊಡಬೇಕು

ವಲಸೆ ಕಾರ್ಮಿಕರು / ಅಸಂಘಟಿತ ಕಾರ್ಮಿಕರಿಗಾಗಿ ರಾಷ್ಟ್ರೀಯ ನೋಂದಣಿ ವ್ಯವಸ್ಥೆ ರಚಿಸುವ ಮೂಲಕ ವಲಸೆ ಕಾರ್ಮಿಕರಿಗೆ ಉದ್ಯೋಗ ಮತ್ತು ಇತರ ನೆರವು ಪಡೆಯಲು ಸಹಾಯ ಮಾಡಲು ವರ್ಗಾವಣೆಯ ಮತ್ತುಡೇಟಾ ವರ್ಗಾವಣೆಯ ಸೌಲಭ್ಯಗಳನ್ನು ರೂಪಿಸುವುದು ಬಡ್ಡಿ ಮನ್ನಾ / ಸಾಲಗಳ ಪುನರ್‌ರಚನೆ, ಸಬ್ಸಿಡಿ ವಿದ್ಯುತ್ ಒದಗಿಸುವುದು ಮುಂತಾದ ಕ್ರಮಗಳ ಮೂಲಕ ಎಂ.ಎಸ್.ಎಂ.ಇ.ಗಳನ್ನು ವಿಶೇಷವಾಗಿ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳು. ಬೆಂಬಲಿಸುವುದು. ಈ ಕೈಗಾರಿಕೆಗಳಿಗೆ ಕಚ್ಚಾ ಸಾಮಗ್ರಿಗಳ ಸರಿಯಾದ ಪೂರೈಕೆಯನ್ನು ಖಚಿತಪಡಿಸಿಕೊಳ್ಳುವ ಅವಶ್ಯಕತೆಯಿದೆ; ಲಾಕ್‌ಡೌನ್‌ನಿಂದ ತೀವ್ರವಾಗಿ ಪರಿಣಾಮ ಬೀರಿದ ಹೋಟೆಲ್‌ಗಳು, ಸಿನಿಮಾ, ಕ್ರೀಡೆ, ಸಾರಿಗೆ ಉದ್ಯಮ ಕ್ಷೇತ್ರಗಳಿಗೆ ಪುಶ್ಚೇತನಕ್ಕಾಗಿ ಸರ್ಕಾರ ಕಾರ್ಯತಂತ್ರಗಳನ್ನು ರೂಪಿಸುವ ಅಗತ್ಯವಿದೆ; ಸಣ್ಣ ಮತ್ತು ಸಣ್ಣ ಕೈಗಾರಿಕೆಗಳ ವೇತನ ಘಟಕದಲ್ಲಿ ಸಬ್ಸಿಡಿ ನೀಡುವುದರಿಂದ ಈ ಉದ್ಯೋಗದಾತರು ತಮ್ಮ ಎಲ್ಲಾ ಕಾರ್ಮಿಕರಿಗೆ ಲಾಕ್‌ಡೌನ್ ಅವಧಿಯ ಸಂಪೂರ್ಣ ವೇತನವನ್ನು ಪಾವತಿಸಲು ಸಾಧ್ಯವಾಗುತ್ತದೆ. ಸಾಂಕ್ರಾಮಿಕ ಪೀಡಿತರನ್ನು ಶುಶ್ರೂಷೆಗಾಗಿ ತಲುಪುವಲ್ಲಿ ಶ್ಲಾಘನೀಯ ಕೆಲಸವನ್ನು ಮಾಡುತ್ತಿರುವ ಆಶಾ ಕಾರ್ಯಕರ್ತೆಯರು/ ಅಂಗನವಾಡಿ ಸ್ವಯಂ ಸೇವಕರಿಗೆ ಸರಿಯಾದ ಆರ್ಥಿಕ ಪ್ರೋತ್ಸಾಹಿಸ ಸಿಗಬೇಕಾಗಿದೆ.

ಲಾಕ್‌ಡೌನ್‌ನಿಂದಾಗಿ ಕೆಲಸ ಕಳೆದುಕೊಂಡ ಕಾರ್ಮಿಕರಿಗೆ ನಗದು ಸಹಾಯವನ್ನು ನೀಡಬೇಕು. ಈ ಸಮಯದಲ್ಲಿ ಕಾರ್ಮಿಕರಿಗೆ ಕೆಲಸದ ಸಮಯವನ್ನು ಹೆಚ್ಚಿಸಬಾರದು ವೇತನ ಸರಿಯಾಗಿ ಪಾವತಿ ಮತ್ತು ಸಂಬಳವನ್ನು ಕಡಿತಗೊಳಿಸದಿರುವ ಬಗ್ಗೆ ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ಹೊರಡಿಸಿರುವ ಕಾರ್ಮಿಕ ಕಾನೂನುಗಳು ಮತ್ತು ಸಲಹೆಗಳ ಕಟ್ಟುನಿಟ್ಟಿನ ಅನುಷ್ಠಾನಗೊಳಿಸಬೇಕಾಗಿದೆ. ಅಸಂಘಟಿತ ಕಾರ್ಮಿಕರು ಮತ್ತು ದೈನಂದಿನ ಕೂಲಿಯವರಿಗೆ ಹಣಕಾಸು ನೆರವು, ಉಚಿತ ಪಡಿತರ ಮತ್ತು ವೈದ್ಯಕೀಯ ಸೌಲಭ್ಯಗಳು ರೈತರಿಗೆ ವೇತನವನ್ನು ಪಾವತಿಸಲು ಅನುಕೂಲವಾಗುವಂತೆ, ಕೃಷಿ ಉತ್ಪನ್ನಗಳನ್ನು ಸರ್ಕಾರವು ಖರೀದಿಸಿ ಸಂಗ್ರಹಿಸಬೇಕು. ತಮ್ಮ ಮನೆಗೆ ಹಿಂದಿರುಗುವ ಅನ್ಯ ರಾಜ್ಯಗಳ ವಲಸೆ ಕಾರ್ಮಿಕರಿಂದ ರೈಲು ಪ್ರಯಾಣ ಶುಲ್ಕ ಪಡೆಯಬಾರದು. ಒಟ್ಟಾರೆಯಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಾರಕ ಕೊರೊನಾದಿಂದ ನಲುಗಿದ ಬಡವ ಕಾರ್ಮಿಕರ ಪುನಶ್ಚೇತನಕ್ಕೆ ವೈಜ್ಞಾನಿಕಯೋಜನೆ ರೂಪಿಸಿ ದೊಡ್ಡ ಮೊತ್ತದ ಹಣಕಾಸಿನ ನೆರವು ನೀಡುವ ಅಗತ್ಯವಿದೆ.

– **ಮಂಜುನಾಥ್ ನಾಯ್ಕ್,** ಹಿರಿಯ ಪತ್ರಕರ್ತರು, ಬೆಂಗಳೂರು.

# ಸ್ಪರ್ಧಾತ್ಮಕ ಸಹಕಾರಿ ಪ್ರಶ್ನೋತ್ತರಗಳು – ಓದಿ ಉತ್ತರಿಸಿ

**1. 97ನೇ ಸಂವಿಧಾನ ತಿದ್ದುಪಡಿ ರೀತ್ಯಾ ಸಹಕಾರ ಸಂಘಗಳ ನಿಬಂಧಕರ ಪಾತ್ರ ................................**

ಎ) ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ

ಬಿ) ಪ್ರವರ್ತಕ ಮತ್ತು ಸಹಾಯ ಮಾಡುವ

ಸಿ) ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಕ

ಡಿ) ಮೇಲಿನ ಎಲ್ಲವು

**2. ಸಹಕಾರ ಸಂಘಗಳ ನೋಂದಣಿ ಮುಖ್ಯ ಉದ್ದೇಶ .......................**

ಎ) ಸ್ವಹಿತಾಸಕ್ತಿ

ಬಿ) ಸದಸ್ಯರ ಆರ್ಥಿಕ ಹಿತ

ಸಿ) ರಾಜಕೀಯ ಲಾಭ

ಡಿ) ಉದ್ಯೋಗ ಸೃಷ್ಠಿ

**3. ಸಹಕಾರ ಸಂಘದ ಪ್ರಸ್ತಾವಿಕ ನೋಂದಣಿ ಅರ್ಜಿಗೆ ಕನಿಷ್ಠ ................. ಅರ್ಜಿದಾರರ ಸಹಿ ಅಗತ್ಯವಿರುತ್ತದೆ.**

ಎ) 20

ಬಿ) 50

ಸಿ) 10

ಡಿ) 100

**4. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ ................ ರೀತ್ಯ ಸಹಕಾರ ಸಂಘವನ್ನು ನೋಂದಾಯಿಸಲಾಗುತ್ತದೆ.**

ಎ) ಕಲಂ–6

ಬಿ) ಕಲಂ–7

ಸಿ) ಕಲಂ–8

ಡಿ) ಕಲಂ–9

**5. ಸಹಕಾರ ಸಂಘದ ಕಾಯ್ದೆಯಡಿಯಲ್ಲಿ ಸಂಘವನ್ನು ನೋಂದಾಯಿಸಲು ನಿಬಂಧಕರಿಗೆ ಗರಿಷ್ಠ ಕಾಲಾವಧಿ .................................. ಇರುತ್ತದೆ.**

ಎ) ಒಂದು ತಿಂಗಳು

ಬಿ) ಆರು ತಿಂಗಳು

ಸಿ) ಮೂರು ತಿಂಗಳು

ಡಿ) ಯಾವುದು ಅಲ್ಲ

**6. ಸಹಕಾರ ಸಂಘದಲ್ಲಿ ಸದಸ್ಯತ್ವ ಸೇರ್ಪಡೆ ಮತ್ತು ಷೇರು ಹಂಚಿಕೆ ಅಧಿಕಾರ ......................... ಇವರಿಗೆ ದತ್ತವಾಗಿರುತ್ತದೆ.**

ಎ) ಸಂಘದ ಅಧ್ಯಕ್ಷರಿಗೆ

ಬಿ) ಸಂಘದ ಮುಖ್ಯ ನಿರ್ವಾಹಕರಿಗೆ

ಸಿ) ಸಂಘದ ಆಡಳಿತ ಮಂಡಳಿಗೆ

ಡಿ) ಸಂಘದ ಸರ್ವ ಸದಸ್ಯರ ಸಭೆಗೆ

**7. ಸಹಕಾರ ಸಂಘದ ಪದಾಧಿಕಾರಿಗಳು ಹಾಗೂ ನಿರ್ದೇಶಕರು ಸ್ವಇಚ್ಛೆ ಮೇರೆಗೆ ನೀಡಿರುವ ರಾಜೀನಾಮೆಯನ್ನು ವಾಪಸ್ ಪಡೆಯಲು ರಾಜೀನಾಮೆ ನೀಡಿದ ದಿನಾಂಕದಿಂದ ಗರಿಷ್ಠ ಕಾಲಾವಧಿ .....................**

ಎ) 30 ದಿವಸಗಳು

ಬಿ) 10 ದಿವಸಗಳು

ಸಿ) 15 ದಿವಸಗಳು

ಡಿ) 7 ದಿವಸಗಳು

**8. ಸಹಕಾರ ಸಂಘದಲ್ಲಿ ಸದಸ್ಯನು ಹೊಂದಿರುವ ಷೇರನ್ನು ವರ್ಗಾಯಿಸಲು ಅಥವ ವಾಪಸ್ಸು ಪಡೆಯಲು ಕಾಯ್ದೆಯಲ್ಲಿ ನಿಗದಿಪಡಿಸಿರುವ ಕನಿಷ್ಠ ಅವಧಿ**

ಎ) ಆರು ತಿಂಗಳು

ಬಿ) ಎರಡು ವರ್ಷಗಳು

ಸಿ) ಒಂದು ವರ್ಷ

ಡಿ) ಮೂರು ವರ್ಷಗಳು

**9. ಸಹಕಾರ ಸಂಘದ ವಾರ್ಷಿಕ ಮಹಾ ಸಭೆಯನ್ನು ಕಾಯ್ದೆಯ ಕಲಂ ..................... ರನ್ವಯ ನಡೆಸಲು ಅವಕಾಶವಿರುತ್ತದೆ.**

ಎ) ಕಲಂ 28–ಎ

ಬಿ) ಕಲಂ 27–ಎ

ಸಿ) ಕಲಂ 27

ಡಿ) ಕಲಂ 28

**10. ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕರನ್ನು ಅನರ್ಹಗೊಳಿಸಲು ಕಾಯ್ದೆಯ ಕಲಂ ............ ಸಂಬಂಧಿಸಿರುತ್ತದೆ.**

ಎ) ಕಲಂ 28ಸಿ

ಬಿ) ಕಲಂ 29–ಬಿ

ಸಿ) ಕಲಂ 29

ಡಿ) ಕಲಂ 29ಎ

**ಹಿಂದಿನ ಸಂಚಿಕೆಯ ಪ್ರಶ್ನೆಗಳಿಗೆ ಉತ್ತರಗಳು :**

**1 - B, 2 - B, 3 - D, 4 - D, 5 - C, 6 - C, 7 - C, 8 - D, 9 - B, 10 - D**